
ಪಂಚಮ



ಸಂಪುಟ : 8 ಡಿಸೆಂಬರ್ 5-20, 1984 ಬೆಲೆ : 1-00 ಸಂಚಿಕೆ : 22-23

ಡಿಸೆಂಬರ್ 6 :

ದಲಿತ ವಿದ್ಯಾವಂತರು 'ಜವಾಬ್ದಾರಿ ಹೊರುವ ದಿನ'

1976ರಲ್ಲಿ ದಲಿತರ ಮೇಲಿನ ಹಲ್ಲೆಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿ ಸಮಾಜದ ಹಿಂದುಳಿದವರೆಲ್ಲರ ಉಸಿರಾಗಿ ಬೆಳೆದ ದಲಿತ ಸಂಘರ್ಷ ಸಮಿತಿ, ಈಗ ನವಂಬರ್ 18ರಂದು ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಸಭೆಯಲ್ಲಿ ತನ್ನದೇ ಸಂವಿಧಾನ, ಬಾವುಟ, ಕಾರ್ಯಕ್ರಮ ಗಳೊಂದಿಗೆ ವ್ಯವಸ್ಥಿತವಾಗಿ ಮುನ್ನಡಿಯಿಡಲು ಸಜ್ಜಾಗಿದೆ.

ಇದೇ ಸಭೆಯಲ್ಲಿ ಆಯ್ಕೆಯಾದ--ರಾಜ್ಯಸಂಚಾಲಕ: ದೇವನೂರ ಮಹಾದೇವ, ಸಂಘಟನಾ ಸಂಚಾಲಕರು : ಎಂ. ಜಯಣ್ಣ ಹಾಗೂ ಸಿ. ಎಂ. ಮುನಿಯಪ್ಪ, ಖಜಾಂಚಿ : ರಂಗಸ್ವಾಮಿ ಬೆಲ್ಲದಮಡು— ಇವರನ್ನೊಳಗೊಂಡ ರಾಜ್ಯಸಮಿತಿಯು ಅಂಬೇಡ್ಕರ್ ಕಣ್ಮರೆಯಾದ ಡಿಸೆಂಬರ್ 6ನೇ ತಾರೀಖನ್ನು ದಲಿತ ಜನಾಂಗದ ವಿದ್ಯಾವಂತರು 'ಜವಾಬ್ದಾರಿ ಹೊರುವ ದಿನ'ವೆಂದು ಪರಿಗಣಿಸಬೇಕೆಂದು ಕರೆ ನೀಡಿದೆ. ಅಂಬೇಡ್ಕರ್‌ರು ದಲಿತ ವಿದ್ಯಾವಂತರ ಬಗ್ಗೆ ಅಪಾರ ಆಸೆ ಇಟ್ಟುಕೊಂಡಿದ್ದನ್ನು ಜನಾಂಗದ ವಿದ್ಯಾವಂತರು ಅರಿತುಕೊಂಡು ಕನಿಷ್ಠ [illegible] ದಲಿತ ಸಮುದಾಯವನ್ನೇ ವಿದ್ಯಾವಂತಗೊಳಿಸುವ [illegible] ತೊಡಬೇಕೆಂದೂ ದಲಿತ ಜನಾಂಗದ ಬಡತನ ಅವ[illegible] ಗಳನ್ನು ರಾಜಕೀಯ ಪಕ್ಷಗಳು ದುರುಪಯೋಗ[illegible]ದುಕೊಂಡು ದಲಿತರ ಮತಗಳನ್ನು ಕೊಳ್ಳುವ ಅಸಹ್ಯಕರ ವರ್ತನೆಗಳನ್ನು ಅಂಬೇಡ್ಕರ್‌ಗೆ ಎಸಗಿದ ಅವಮಾನ ಎಂದು ಪರಿಗಣಿಸಿ ದಲಿತ ವಿದ್ಯಾವಂತರ[illegible]ಚಾರಮಾಡಿ ಈ ಮೂಲಕ ಅಂಬೇಡ್ಕರ್‌ಗೆ ಗೌರವ ಸಲ್ಲಿಸಬೇಕೆಂದು ಕರೆನೀಡಿದೆ. ಜೊತೆಗೆ ಭಾರತದ ಜಾತಿ ಪಾಶವ[illegible]ದಲಿತ[illegible] ಬೇಕೆಂಬ ಅಂಬೇಡ್ಕರ್ ಆಸೆ ಫಲಿಸಲು ಇಂದಿಗೂ ತಡೆಯಾಗಲಿರುವ ದಲಿತ ಗುಲಾಮಗಿರಿ ವಿರುದ್ಧ ಹೋರಾಡಬೇಕಾದ ಅಗತ್ಯವನ್ನು ವಿದ್ಯಾವಂತರು ಜನಸಮುದಾಯಕ್ಕೆ ಮನಗಾಣಿಸಬೇಕೆಂದು ಸಂಘರ್ಷ ಸಮಿತಿಯು ಕರೆ ನೀಡಿದೆ.

ನಿನ್ನ ಕಣ್ ಬೆಳಕಿನ ಚೂಪು
ಗೋರಿಗಟ್ಟಿದ ಇಲ್ಲಿಯ ಕತ್ತಲ ಹರಿಯಲೆ ಇಲ್ಲ.
ನೀನಿಟ್ಟ ಗಟ್ಟಿ ಹೆಜ್ಜೆಯಲ್ಲಿ
ನೀ ಕ್ರಮಿಸಿದ ದೂರ ನಡೆದವರೆ ಇಲ್ಲ.
ರಸ್ತೆಯಂಚಿನ ಮರಗಳ ಕೆತ್ತಿ ನಂಬರು ತೊಡೆದ ಹಾಗೇ
ಅಲ್ಲಿ—ನೀನೇ ನಿರ್ಮಿಸಿದ ಸಂವಿಧಾನಬದ್ಧ ದೇಶದಲ್ಲಿ-
ನಿನ್ನ ಜನ ನಂಬರುಗಳಾಗಿದ್ದಾರೆ
ಶೇಕಡದೊಳಗೆ ತೆವಳುತ್ತ ಗ್ರಂಥಸ್ಥ ಶೂನ್ಯವಾಗಿದ್ದಾರೆ.
ನಿನ್ನುದಾತ್ತ ಕಣಸುಗಳು ಅಂತರಪಿಶಾಚಿಯಾಗಿ ಕಾಡುತ್ತಿವೆ
ನಮ್ಮ ಹಗಲೂ ಇರುಳೂ.
ನ್ಯಾಯ ಸಮಾನತೆ ಸ್ವಾತಂತ್ರ್ಯಗಳ ನಿನ್ನ ಸಂದೇಶದ
ಮೂಲೆಗಲ್ಲುಗಳ ಒಲೆಯಲ್ಲಿ ಬೇಳೆ ಬೇಯಿಸುತ್ತಿದ್ದಾವೆ
ತೋಳ ಚಿರತೆ ಕತ್ತೆ ಕಿರುಬಗಳು.
ನಿನ್ನಾದರ್ಶಗಳ ಪೀಠದಲ್ಲಿ ಅಂಡು ಹೇರಿವೆ ಜಿಗಣೆಗಳು.
ಊರಿಗೆ ರಸ್ತೆ ಬಂದಿದೆ. ರಸ್ತೆಗೆ ಬಸ್ಸು ಆಸ್ಪತ್ರೆ ಗಡಂಗು

ಅಂಬೇಡ್ಕರ್ ಅವರಿಗೆ...

ಶಾಲೆ ದೇವಸ್ಥಾನ ಸ್ಮಶಾನ ಎಲ್ಲ ಎಲ್ಲ ಖಂಡಿತ.
ಬಂದಿಲ್ಲ ಇನ್ನೂ ನಮ್ಮವಕ್ಕೆ ಬುದ್ಧಿ.
ಮನೆಮುಂದೆ ಕುಕ್ಕರಿಸಿ ಹಲ್ಲಿಗೆ ಕಡ್ಡಿ ಹಾಕುತ್ತ
ಮೈ ತುರುಸುತ್ತ ಚಂಡಬಿಸಿಲಿಗೆ ಮೈಯೊಡ್ಡುತ್ತ
ಬಿದ್ದಿರುವ ನಾವು—
ಅಂಬೇಡಕರ, ಬಹಳ ತಡವಾಗಿ ಹುಟ್ಟಿದವರು.
ಇಲ್ಲ, ನೀನೆ ನಮಗೆ ಇಂದು ಮಾತು ಹೇಳದೆ ಹುಟ್ಟಿದೆ-
ಹುಟ್ಟಿ ಹೋದೆ....

ಆದರು ಒಂದು ದಿನ
ಅಂಬಲಿಗೆ ಮಾರುದ್ದ ಚಾಚಿಕೊಳ್ಳುವ ನಮ್ಮ ಬೊಗಸೆಯಲ್ಲಿ
ಸೂರ್ಯ ಪ್ರತಿಫಲಿಸಿ ಕೆಂಪು ಕೆಂಪಾಗಿ
ಮತ್ತೆ ಎದ್ದು ಬರುವುದು ಖಂಡಿತ.
ಆಗ ನಾವು, ಅಂಬೇಡಕರ,
ಒಡನಾಡಿಗಳಾಗೋಣ.

—ಆರ್.

ಇಂಡಿಯಾಕ್ಕೆ ಆತ್ಮ ಎಂಬುದು ಇದ್ದರೆ....

ಪ್ರಧಾನಿಯ ಅಂಗರಕ್ಷಕರಾದಂತ ಸಿಕ್ಖರು ಇಂದಿರಾಗಾಂಧಿಯವರನ್ನು ಗುಂಡಿಕ್ಕಿ ಕೊಂದ ದಿನ ಇತಿಹಾಸ ಎಂದೆಂದೂ ಕ್ಷಮಿಸದ ದಿನ. ಇಂದಿರಾಗಾಂಧಿಯವರ ಸಾವಿನ ಸೆರಗಿನ ಮರೆಯಲ್ಲಿ ಜೀವಭಯ, ಆಸ್ತಿಪಾಸ್ತಿಯ ಧ್ವಂಸ, ಲೂಟಿ, ಬೆಂಕಿ ಹಚ್ಚುವುದು ಸಿಕ್ಖರನ್ನು ಹುಡುಕಿ ತಡಕಿ ಹಿಂಸಿಸುವುದು, ಸಾವಿರ ಸಾವಿರ ಸಾವು, ಇವೆಲ್ಲವೂ ಹಿಂಸೆಯ ಒಂದು ರೂಪಾದರೆ, ಇನ್ನೊಂದು ರೂಪು ನಮ್ಮ ಕಲ್ಪನೆಗೂ ಸಿಗಲಾರದಂತದ್ದು. ಅದಾವುದೆಂದರೆ ಅಕಸ್ಮಾತ್ ಮುಸ್ಲಿಂ ಪ್ರಜೆಯೊಬ್ಬ ಇಂದಿರಾಗಾಂಧಿಯ ಹಂತಕನಾಗಿದ್ದರೆ ಲಕ್ಷ ಲಕ್ಷ ಸಾವುಗಳನ್ನು ನಾವು ಕಾಣಬೇಕಾಗಿತ್ತೇನೊ, ನಮ್ಮ ಸಂಕಟವೇ ನಮ್ಮನ್ನು ಸುಟ್ಟುಬಿಡುತ್ತಿತ್ತೇನೊ? ಇಂಡಿಯಾದ ಪ್ರತಿಹಳ್ಳಿಯೂ ಒಂದೊಂದು ಪಂಜಾಬ್ ಆಗಿಬಿಡಬಹುದಿತ್ತು. ಈ ಅಖಂಡ ಹಿಂಸೆಯು ಅಂತರಂಗ ಬಹಿರಂಗವು ಸಾವಿನ ರೂಪದಲ್ಲಿ ಇಂದಿರಾಗಾಂಧಿಯನ್ನು ನುಂಗಿದರೆ, ಅಧಿಕಾರ ರೂಪದಲ್ಲಿ ನೆಹರು ಕುಟುಂಬದ ಸದಸ್ಯನಾದ ರಾಜೀವ್‌ಗಾಂಧಿಯನ್ನು ಪ್ರಧಾನಿ ಪಟ್ಟವು ನುಂಗುತ್ತಿದೆ.

ಹಿಂಸೆಯ ಈ ನಗ್ನ ಅವತಾರಕ್ಕೆ ಸಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮುಂತಾಗಿ ಕಾರಣಗಳನ್ನು ಉಲ್ಲೇಖಿಸಬಹುದು. ಈ ಯಾವುದೇ ಕಾರಣಗಳು ಒಂದು ಸತ್ಯಾಂಶವನ್ನು ಮಾತ್ರ ಮುಚ್ಚಾಕಲು ಸಾಧ್ಯವಿಲ್ಲ. ಅದೆಂದರೆ ; ಪ್ರಾರ್ಥನ ಮಂದಿರದಲ್ಲಿ ಮಹಾತ್ಮ ಗಾಂಧಿಯವರನ್ನು ಗುಂಡಿಕ್ಕಿ ಕೊಂದ ಮನಸ್ಸೇ ಇಂದಿರಾಗಾಂಧಿಯವರಿಗೂ ಗುಂಡಿಕ್ಕಿರುವುದು. ಇದೇ ಮನಸ್ಸು ಹಿರೋಸೀಮಾ ನಾಗಾಸಾಕಿಯ ಮೇಲೆ ನಡೆಸಿದ ಬಾಂಬ್ ದಾಳಿಯು ಇಡೀ ಜಗತ್ತನ್ನೆ ದಿಕ್ಕೆಡಿಸಿರುವಾಗ್ಗ ಸತ್ತ ಜಪಾನ್ ಬೂದಿಯಿಂದ ಮತ್ತೊಮ್ಮೆ ಹುಟ್ಟಿ ಮನುಷ್ಯನಾಗಿ ಬೆಳೆಯುತ್ತಿರುವುದು ಹೇಗೆ ? ಯಾವ ಅತ್ಮ ಸಂಯಮ, ಯಾವ ಮಾನವ ಪ್ರೇಮ, ಯಾವ ಸ್ವತಂತ್ರ, ಯಾವ ಸಮಾನತೆ, ಯಾವ ಪ್ರಕೃತಿಯ ಬೆಳಕು ಜಪಾನಿನ ಆತ್ಮದೊಳಗೆ ಸಂಚಾರ ಮಾಡಿತು, ಕಾಪಾಡಿತು ?

ಆದರೆ, ಅಂದು ಮಹಾತ್ಮಗಾಂಧಿಜೀಯನ್ನು ಕೊಂದ ಇಂಡಿಯಾದಮನಸ್ಸು, ಈಗಇಂದಿರಾಗಾಂಧಿಯವರನ್ನು ಕೊಂದಿದೆ,ಈಗಸಿಕ್ಖರನ್ನುಬೇಟೆಯಾಡುತ್ತಿದೆ. ನಾವು ಯಾವತ್ತು ಅದರ ಕಣ್ಣಿಗೆ ಬೀಳುತ್ತೇವೆಂದು ನಿದ್ದೆ ಬರುತಿಲ್ಲ. ಆ ಮನಸ್ಸುರೂಪಾಗಿ ಬಂದು ನಮ್ಮ ಮನೆಯ ಬಾಗಿಲ ತಟ್ಟುವವರೆಗೂ ಬಿಡಬಾರದು.. ತಡೆಯಬೇಕು. ಬದಲಿಸಬೇಕು. ದ್ವೇಷವನ್ನು ಪ್ರೀತಿಯೂ, ಹಿಂಸೆಯನ್ನು ಅಹಿಂಸೆಯೂ ಸೋಲಿಸುತ್ತದೆಂಬ ಆತ್ಮ ಸಂಯಮದ ಪ್ರಕೃತಿ ಬೆಳಕು ಇಂಡಿಯಾ ಎಂಬ ಹೆಸರಿನ ಮನುಷ್ಯನೊಳಗೆ ಸಂಚರಿಸಲಿ. ಇಲ್ಲವಾದರೆ

ಮಹಾತ್ಮಗಾಂಧಿಗೆ ಗುಂಡಿಕ್ಕಿದ ನಾಡಿಗೆ
ಕ್ಷಮೆ ಇಲ್ಲಾ !
ಇಂದಿರಾ ಗಾಂಧಿಗೆ ಗುಂಡಿಕ್ಕಿದ ನಾಡಿಗೆ
ಕ್ಷಮೆ ಇಲ್ಲಾ !
ಮಹಿಳೆಯರನ್ನು, ಅಸ್ಪೃಶ್ಯರನ್ನು ಜೀವಂತ
ಸುಡುವ ನಾಡಿಗೆ ಕ್ಷಮೆ ಇಲ್ಲಾ !

—ಕೆ. ಬಿ. ಸಿದ್ಧಯ್ಯ

ಇಂದಿರಾ ಕೊಲೆ ತಲ್ಲಣ

ಈ ಕೊಲೆ ಭಾರತಕ್ಕೆ ಗರ ಬಡಿಸಿದೆ. ಇಂದಿರಾರ ಕಡು ವೈರಿಯೂ ಇದನ್ನು ಸಹಿಸಲಾರನು. ಯಾಕೆಂದರೆ ಯಾರ ಕೊಲೆಯೂ ಯಾವ ಸಮಸ್ಯೆಯನ್ನೂ ಬಗೆಹರಿಸಲಾರದು. ಆದ ಕೊಲೆಯು ಮುಂದಿನ ಕೊಲೆಗೆ ಬೇರು ಬಿಟ್ಟಿರುತ್ತದೆ.

ಇಂದಿರಾ ಹೆಸರು ದಲಿತರು ಮುಸ್ಲಿಮರಿಗೆ ಒಂದು ಶಕ್ತಿಯಾಗಿತ್ತು. ಆ ಹೆಸರ ನೆರಳಲ್ಲೆ ಈ ದಿಕ್ಕಿಲ್ಲದ ಜನಾಂಗಗಳು ಉಸಿರಾಡುತ್ತಿದ್ದವು. ಈ ಉಸಿರಾಟ ಇಂದಿರಾ ಇಲ್ಲದೆ ಏರುಪೇರು ಆಗಿದೆ. ಚೇತರಿಸಿಕೊಳ್ಳಲು ಪ್ರತಿ ಜೀವಿಯೂ ಚಡಪಡಿಸುತ್ತಿದೆ.

ಇಂದಿರಾ ಬಲಿಷ್ಠ ನಾಯಕಿ ಆಗಿದ್ದರು. ಆಕೆಯ ಎದುರು ಉಳಿದೆಲ್ಲಾ ನಾಯಕರೂ ಸಾಕು ನಾಯಿಗಳಾಗಿದ್ದರು. ಯಾರಿಗೂ ಹಲ್ಲು ಇರಲಿಲ್ಲ. ಯಾರಿಗೂ ಉಗುರು ಇರಲಿಲ್ಲ.ಇಂದಿರಾ ಎದುರು ಆಕೆಯನ್ನು ಪೂಜಿಸುತ್ತಿದ್ದ ಜನತೆ ಇತ್ತು. ಈ ಜನತೆಗಾಗಿ ಇಂದಿರಾರು ಗಂಗಾ ಕಾವೇರಿ ಕೂಡಿಸಿ ಎರಡು ಎಕರೆ ಭೂಮಿತಿ ಮಾಡಿ ಅನ್ನ ಕಾಣಿಸಲಿಲ್ಲ, ಯಾಕೆ ? ದೊಡ್ಡ ಕೈಗಾರಿಕೆಗಳನ್ನು ಮುಚ್ಚಿ [illegible]ಗಳಿಗೆ ಕೆಲಸ ಕಾಣಿಸಲಿಲ್ಲ, ಯಾಕೆ? ಆಕೆಗೆ ತಡೆ



ಒಬ್ಬ ಇಲ್ಲದಾಗಲೂ ಇದಾಗಲಿಲ್ಲ ಯಾಕೆ? ಬಲಿಷ್ಠ ನಾಯಕಿ ಇಂದಿರಾ ಕೈಲಿ ಆಗದ ಇದು ಇನ್ನಾರು ಮಾಡುವರು ? ಆಕೆಯ ರಂಜಕ ನೆನಪಿನೊಡನೆ ಆಕೆ ಬಲಿಷ್ಠರಾಗಿದ್ದ ಕಾರಣ ಇದು ನೆನಪಾಗುತ್ತದೆ.

ಕಳೆದ ಒಂದು ದಶಕವು ಒಂದು [illegible]ಗದಂತೆ ನಮ್ಮ ಎದುರೇ ಏನೆಲ್ಲಾ ಆಗಿಸಿದೆ! [illegible]ರು ಸ್ವಯಂ ತಮ್ಮ ಕೈಯಾರ ಬಿಂದ್ರನ್[illegible]ವನ್ನು ನೆಟ್ಟರು. ಈ ವಿ ಷ ಬಿ[illegible] ನೆಡಬಾರದಾಗಿತ್ತು. ಬಿಂದ್ರನ್‌ವಾಲ[illegible]ಗಿಡವಾಗಿ ಇಂದಿರಾಗೆ ಎದುರು ನಿಂತಿತು. [illegible]ರು ನಿಂತ ಅದನ್ನು ಅವರ ಸಹಚರರೊಡನೆ ಕತ್ತರಿ[illegible]ಟ್ಟಿತು. ಆದರೆ ಆ ಕತ್ತರಿಸಲ್ಪಟ್ಟ ಗಿ[illegible] ರಕ್ತವು ಮುಂದಿನ ಕೊಲೆಯನ್ನೂ [illegible]ಳಗೊಳಿಸಿ ಚಡೆದಿತ್ತು. ಯಾಕೆಂದರೆ [illegible]ರಾರನ್ನು ಬಲಿತೆಗೆದುಕೊಂಡಿತು [illegible]ಬಲಿ ತನ್ನೊಡನೆ ಸಾವಿರಾರು ಕೊಲೆ[illegible]ತು.

ಇಂದಿರಾರ ಕೊಲೆಯ ರಕ್ತದ ನೆನಪಿಗೆ ಅಂಟಿಕೊಂಡಿರುವ ಸಾವಿರಾರು ಕೊಲೆಯ ಆರೆಸುಟ್ಟ ವಾಸನೆಯ ಘಾಟು ಎಂದು ಇಲ್ಲವಾಗುತ್ತದೆ ? ಅರೆಬೆಂದ ಹೆಣಗಳ ತೇಲಿಸಿಕೊಂಡು ನಡೆದ ಯಮುನಾ ನದಿ ಎಂದು ತಿಳಿ ಆಗುತ್ತದೆ ? ದೇವರೇ ಕೊಲೆ ನಿಲ್ಲಿಸು ಎಂದು ಮೊರೆ ಇಡ[illegible] ಬೇಕಾದ ಅಸಹಾಯಕತೆ ನಾವಾಗಿದ್ದೇವೆ. ಈ ಕೊಲೆ ಸಂಕಟದಿಂದಾಗಿ ನಮ್ಮ ಕಾಲು ಕೈ ಸೋತಿದೆ ನಮ್ಮ ಬಾಯಿ ಕಟ್ಟಿದೆ, ನಾವು ದುಃಖವಾಗಿದ್ದೇವೆ.

ಇಂದು ಇಂಥ ಪರಿಸ್ಥಿತಿಯಲ್ಲೂ ಕೊಲೆಗೆ ಪ್ರತಿ ಕೊಲೆಯು ನಮ್ಮನ್ನು ಉಳಿಸುವುದಿಲ್ಲ ಎಂಬ ಅರಿವು ವಿವೇಕ ಬೇಕಾಗಿದೆ. ಮಹಾತ್ಮಗಾಂಧಿಯವರನ್ನು ಯಾರೋ ಒಬ್ಬ ಮತಾಂಧ ಬ್ರಾಹ್ಮಣ ಕೊಂದುದಕ್ಕೆ ಬ್ರಾಹ್ಮರನ್ನೆಲ್ಲ ಸಂಹರಿಸಬೇಕೆ ? ಇಂದಿರಾರನ್ನು ಒಬ್ಬ ಮತಾಂಧ ಸಿಕ್ ಕೊಂದುದಕ್ಕೆ ಸಿಖ್ಖರನ್ನೆಲ್ಲಾ ಸಂಹರಿಸಬೇಕೆ ?ಈಗ ನಮ್ಮ ಜಾತಿಯವನೇ ಒಬ್ಬ ಕೊಲೆಗಾರನಾಗಿದ್ದರೆ ಅದಕ್ಕೆ ಆ ಜಾತಿಯೇ ಹೊಣೆಯೇ ? ಭಾಷೆಜಾತಿ ಮತಗಳು ನಮ್ಮ ಕಣ್ಣುಗಳನ್ನು ಕುರುಡಾಗಿಸಿವೆ. ಇದೇ ಕ್ರೂರವಾಗಿ ಬಿಡದೆ ಪ್ರಧಾನಿಯನ್ನು ಕೊಲೆ ಮಾಡಿಸುತ್ತಿದೆ.

ಈಗ ಈ ಕೊಲೆಯ ಸರಪಳಿಗೆ ಮೂಲವಾಗಿದ್ದು ನಮ್ಮನ್ನು ದಿಕ್ಕು ತಪ್ಪಿಸುತ್ತಿರುವ ಭಾಷಾವಾರು ಪ್ರಾಂತ್ಯರಚನೆ, ಕೇಂದ್ರೀಕೃತ ಅಧಿಕಾರ ವ್ಯವಸ್ಥೆ ವಿರುದ್ಧವಾಗಿ ಹೋರಾಡಿ ನಾವು ಉಳಿಯಬೇಕಾಗಿದೆ.

—ದೇವನೂರ ಮಹಾದೇವ

ತೆಗೆದುಕೊಂಡು ಹೋಗುವುದಾಗಿ ತಿಳಿಸಿದರು. ಅಲ್ಲಿಗೆ ಸರ್ಕಲ್‌ಇನ್ಸ್‌ಪೆಕ್ಟರ್ ಅವರು ವಾಪಾಸ್ಸಾಗಿ ಆಳಂದಕ್ಕೆ ಹೋದರು.

ಇತ್ತ ಸವರ್ಣಿಯರೆಲ್ಲ ಕೂಡಿಕೊಂಡು ನಾವು ದಲಿತರಿಗೆ ನೀರು ಕೊಡಕೂಡದು ನೀರು ತೆಗೆದು ಕೊಂಡು ಹೋಗುವುದನ್ನು ನಿರ್ಬಂಧಿಸಬೇಕೆಂದು ಒಳಗೊಳಗೆ ಚರ್ಚಿಸಲು ಪ್ರಾರಂಭಿಸಿದರು. ಆದರೆ 50 ವರ್ಷದ ಉತ್ಸಾಹಿ ಮರಾಠರ ಜಾತಿಗೆ ಸೇರಿದ ಭಾವೂರಾವ ಜಾತಿಗೀತಿಗಳನ್ನು ನಂಬಲಾರದವರು. ಇವರು ಫೂಲೆ, ಲೋಹಿಯಾ, ವಿನೋಭಾರವರೆಲ್ಲರನ್ನು ಓದಿತಿಳಿದುಕೊಂಡವರು. ಹಿಂದೊಮ್ಮೆ ಸೋಷಲಿಸ್ಟ ಪಕ್ಷದಲ್ಲಿದ್ದ ಪ್ರಾಮಾಣಿಕರು.

ಮೇಲು ಕೀಳೆನ್ನದೇ ಒಂದಾಗಿ ಬಾಳಬೇಕೆನ್ನುವ ಭಾವೂರಾವರು ಸವರ್ಣಿಯರಿಗೆಲ್ಲ ತಿಳಿ ಹೇಳಿದರೂ ಉಪಯೋಗವಾಗಲಿಲ್ಲ. ಅವರ ಚರ್ಚೆ ಎಂತಹವರನ್ನೂ ಮುಗ್ಧರನ್ನಾಗಿಸುವಂತಹದು. ಅವರೊಂದಿಗೆ ಚರ್ಚಿಸಿದ ಕೆಲ ತುಣಕನ್ನು ಇಲ್ಲಿ ನೋಡಿ : ನಿಮ್ಮ ಮಕ್ಕಳೂ ದಲಿತರ ಮಕ್ಕಳೂ ಕೂಡಿ ಒಟ್ಟಿಗೆ ಸರಕಾರಿಯ ಬೋರ್ಡಿಂಗನಲ್ಲಿವೆ. ಅವರು ಅಲ್ಲಿ ಕೂಡಿಯೇ ಊಟಮಾಡುತ್ತಾರೆ. ಕೂಡಿಯೇ ಆಟವಾಡುತ್ತಾರೆ. ಕೂಡಿಯೇ ನಲಿದಾಡುತ್ತಾರೆ. ಅಷ್ಟೇ ಅಲ್ಲ ನೀವು ಶಹರಕ್ಕೆ ಹೋದರೆ ಅವರ ಜೊತೆಗೆ ಒಂದೇ ಟೇಬಲ ಮೇಲೆ ಕುಳಿತು ಊಟ ಮಾಡ್ತಿರಿ. ಆದರೆ ಅವರೇ ಇಲ್ಲಿ ಬಂದು ನೀರು ಕೇಳಿದರೆ, ತೆಗೆದುಕೊಂಡು ಹೋದರೆ ಸಿಟ್ಟಾಗ್ತಿರಿ ಇದು ಸರಿಯೇ ? ಎಂದೆಲ್ಲ ಪ್ರಶ್ನೆ ಕೇಳುತ್ತಾರೆ. ಆದರೆ ಇದಾವುದೂ ಅವರ ದಪ್ಪ ಚರ್ಮವನ್ನು ಒಳ ಹೊಕ್ಕಲಿಲ್ಲ.

21–10–84ರಂದು ನೀರ ತರಲೆಂದು ಹೋದ ದಲಿತರಿಗೆ ನಿರಾಶೆ ಕಾಯ್ದಿತ್ತು. ಅಲ್ಲಿ ನೀರು ಬರದಂತೆ ಕಲ್ಲುಗಳನ್ನು ತುಂಬಿದ್ದರು. ಇದನ್ನು ಕಂಡು ದಲಿತರ ಉತ್ಸಾಹಿ ಪ್ರಕಾಶ ಮತ್ತೇ ಆಳಂದ ಪೋಲಿಸ್ ಸ್ಟೇಶನಕ್ಕೆ ದೂರು ತೆಗೆದುಕೊಂಡು ಹೋಗಿ ಕೊಟ್ಟ–21–10–84ರಂದು ಸಂಜೆ4ಕ್ಕೆ. ಆದರೆ ಆಗ ದೀಪಾವಳಿ ಹಬ್ಬ ಇದ್ದಿದ್ದರಿಂದ ಅತ್ತ ಯಾವ ಪೋಲಿಸರೂ ಸುಳಿಯಲಿಲ್ಲ.

ದಿನಾಂಕ 24–10–84 ರಂದು ಸಂಜೆ 6ಗಂಟೆಗೆ ಆಳಂದ ಪೋಲಿಸ್ ಸಬ್ ಇನ್ಸಪೆಕ್ಟರ ಕವಳಪ್ಪ ಕೊತನಹಿಪ್ಪರ್ಗಾಕ್ಕೆ ಬಂದರು. ಅವರು ನೇರವಾಗಿ ದಲಿತರ ಓಣಿಗೆ ಹೋಗದೇ ಊರಲ್ಲಿದ್ದ ಪಂಚಾಯ್ತಿ ಆಫೀಸಿಗೆ ಹೋದರು. ಅಲ್ಲಿಗೆ ಅರ್ಜಿಕೊಟ್ಟ ದಲಿತ ಯುವಕ ಪ್ರಕಾಶನಿಗೆ ಕರೆಸಿದರು. ಮಗನಿಗೆ PSI ಕರೆಯಿಸಿದ್ದನ್ನು ತಿಳಿದ ಅವನ ತಂದೆ 55 ವರ್ಷದ, ಜಡ್ಡು ಬಂದು ಮಲಗಿದ್ದ ಮಹದೇವ ಸಹ ಮಗನ ಜತೆಗೆ ಬೇಡವೆಂದರೂ ಪಂಚಾಯ್ತಿ ಆಫೀಸಿಗೆ ಹೋದರು. ಜೊತೆಗೆ ಅವನ ತಾಯಿ ಸಹ ಇದ್ದರು. ಬಂದ ದಲಿತರನ್ನೇ ಜಬರಿಸುತ್ತಾ ನಿಮಗೆಲ್ಲಾ ಎಷ್ಟಂತ ಸಹಾಯ ಕೊಡಬೇಕರೋ ಎಂದು ಪೋಲಿಸ್ ಇನ್ಸಪೆಕ್ಟರ ದಬಾಯಿಸುತಿದ್ದರೂ ತಮ್ಮ ಕಷ್ಟವನ್ನೆಲ್ಲ ಅದೇ ಪೋಲಿಸನ ವ ುಂದೆ ತೋಡಿಕೊಳ್ಳುತ್ತಿದ್ದರು. ಸಂಜೆ ಕತ್ತಲು ಆಗ್ತಾಇತ್ತು. ಊರ ಜನ ಬಹಳಷ್ಟು ಗುಂಪು ಗೂಡಿದ್ದರು. ಗುಂಪಿನಲ್ಲಿಂದ ಸಿದ್ದರಾಮಪ್ಪ ದಳಪತಿ ಬಂದು PSIಯವರಿಗೆ ಕೈಹಿಡಿದು ಎಳೆದುಕೊಂಡು ಹೋಗುತ್ತ ನಿಮಗೆಲ್ಲ ಹಳ್ಳಿಯ ವಿಷಯ ಗೊತ್ತಾಗೋದಿಲ್ಲವೆಂದು ತಿಳಿಸಿ ಕರೆದುಕೊಂಡು ಹೋಗೇಬಿಟ್ಟರು. ಅಲ್ಲಿ ಸೇರಿದ್ದ ಹಿರಿಯರಿಗೂ ಇಲ್ಲಿಂದ ನಡಿಯಿರಿ ಎಂದು ಕೆಲವರು ಕೈ ಹಿಡಿದುಕೊಂಡು ಹೋದರು. ಅಲ್ಲಿಂದ ಅವರು ಹೋದ ಕ್ಷಣ ಕಲ್ಲುಗಳು ಪಂಚಾಯ್ತಿ ಆಫೀಸಿಗೆ ಬರ್ರ ಬರ್ರ ಎಂದು ಬೀಸಲಾರಂಭಿಸಿದವು. ಕಲ್ಲುಗಳು ಒಂದಕ್ಕೊಂದು ತಾಗಿದಾಗ ಬೆಂಕಿಯ ಕಿಡಿಯನ್ನೇ ಕಾರುತಿದ್ದವು. ಅಷ್ಟೊಂದು ರಭಸದ ಕಲ್ಲು ತೂರಾಟ ಅರ್ಧಗಂಟೆ ತನಕ ನಡೆಯಿತು. ಅಲ್ಲಿದ್ದ ದಲಿತರ ಪರ ಬಾವೂರಾವರಿಗೆ ಕಲ್ಲು ಬಡಿದು ತಲೆ ಒಡೆದು ರಕ್ತ ಸೋರಲು ಪ್ರಾರಂಭವಾಯಿತು. ಅವರು ಉಟ್ಟ ದೋತರಅಂಗಿಯೆಲ್ಲ ರಕ್ತದಲ್ಲಿತೊಯ್ದುಹೋದವು. ಕೈಯಿಂದ ಒತ್ತಿ ಹಿಡಿದರೂ ರಕ್ತನಿಲ್ಲಲಿಲ್ಲ. ಪಂಚಾಯ್ತಿ ಆಫೀಸಿನ ಕೋಣೆಯಲ್ಲಿ ದಲಿತ ಯುವಕ ಪ್ರಕಾಶನಿಗೆ ಕೂಡಿಹಾಕಿ ಬೀಗ ಜಡಿದಿದ್ದರು. ಅವನು ಒಳಗೆ ಚೀರಾಡುತ್ತ ಇದ್ದ. ಕಿಟಕಿಯಿಂದ ಕಲ್ಲು ಸಿಡಿದು ಬೆಂಕಿ ಕಾರುತಿದ್ದ ಕಂಡು ತಮ್ಮ ತಂದೆಯ ಸ್ಥಿತಿ ಏನಾಯಿತೋ ಎಂದು ಆತಂಕದಿಂದ ಜೋರಾಗಿ ಹಲುಬಲಾರಂಭಿಸಿದರೂ ಕೀಲಿಯನ್ನು ತೆಗೆಯುವವರು ಯಾರೂ ಇಲ್ಲ. ಅವನ ತಂದೆ ಮಹಾದೇವನ ತಲೆ ಒಡೆದು ಹೋಳಾಗಿತ್ತು. ಪ್ರಜ್ಞೆ ಕಳೆದುಕೊಂಡು ಹೆಣದಂತೆ ಬಿದ್ದಿದ್ದ. ಸಹ ದೇವ, ರಾಜೇಂದ್ರ, ಗೋರಕನಾಥ, ಕಲ್ಯಾಣರಾವ, ಇವರಿಗೂ ಕಲ್ಲಿನ ಹೊಡೆತಗಳು ಬಿದ್ದವು. ನೋಡ ನೋಡುತ್ತಿದ್ದಂತೆಯೇ ಕೊತನಹಿಪ್ಪರ್ಗಾ ಸಣ್ಣ ಕುಗ್ರಾಮದಲ್ಲಿ ರಕ್ತದ ಹೊಳೆ ಹರಿದಿತ್ತು. ಇದೆಲ್ಲ ಆದ ಅರ್ಧಗಂಟೆಯ ನಂತರ ಅಡಗಿ ಕುಳಿತ ಸಬ್ ಇನ್ಸಪೆಕ್ಟರ ಬಂದು ಪೆಟ್ಟು ತಿಂದವರ ಸ್ಥಿತಿ ನೋಡಿ ಬಾಯಿ ಮಾತಿನ ರಕ್ಷಣೆ ಕೊಟ್ಟರು. ಇದಕ್ಕಿಂತ ಹೆಚ್ಚಿಗೆ ಅವನು ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಬರುವಾಗ ಡ್ರೆಸ್ಸು ಬಿಟ್ಟು ಏನೂ ತಂದಿರಲಿಲ್ಲ. ಅವನ ತಲೆ ರಕ್ಷಿಸಿಕೊಂಡಿದ್ದೆ ದೊಡ್ಡ ರಕ್ಷಣೆ ಅವನಿಗೆ.

25–10–84ರಂದು ಗುಲಬರ್ಗಾ ಆಸ್ಪತ್ರೆಗೆ ಭಾವುರಾವ, ಮಹದೇವ, ಸಹದೇವರನ್ನು ಚಿಕಿತ್ಸೆಗಾಗಿ ಸೇರಿಸಿಹೋದರೂ, ಇವರ ಸ್ಥಿತಿ ಚಿಂತಾಜನಕವಾಗಿತ್ತು. ಪೆಟ್ಟು ತಿಂದ ಉಳಿದವರು ಊರಲ್ಲೇ ಆರೈಕೆ ಮಾಡಿಕೊಳ್ಳುತ್ತಿದ್ದರು.

ಈ ವಿಷಯ ಗುಲಬರ್ಗಾ ದಲಿತ ಸಂಘರ್ಷ ಸಮಿತಿಗೆ ಗೊತ್ತಾಗಿ ಸಮಿತಿಯವರು ಆಸ್ಪತ್ರೆಗೆ ಹೋಗಿ ಅವರನ್ನೆಲ್ಲ ಭೇಟಿಯಾಗಿ ಧೈರ್ಯ ಹೇಳಿದ್ದಾರೆ. ಅವರ ನ್ಯಾಯಯುತ ಹೋರಾಟದಲ್ಲಿ ಭಾಗವಹಿಸಿ ಸಹಕರಿಸುವುದಾಗಿ ತಿಳಿಸಿದ್ದಾರೆ. ದಿನಾಂಕ 27–10–84ರಂದು ಇವೆಲ್ಲ ಪ್ರಕರಣವನ್ನು ಖಂಡಿಸಿ ಕೊತನಹಿಪರ್ಗಾ ಗ್ರಾಮದದಲಿತರಿಗೆ ನ್ಯಾಯ ದೊರಕಬೇಕೆಂದು ಆಳಂದ ತಾಲ್ಲೂಕಿನ ಸಂಘರ್ಷ ಸಮಿತಿಯು ಮೆರವಣಿಗೆ ಮಾಡಿದೆ.

ಪಂಚಮ ಬಳಗ

(ಕಳೆದ ಸಂಚಿಕೆಯಿಂದ ಮುಂದುವರಿದುದು)

29. ಜಿ. ವಿ. ಸುಂದರ್, ಬೆಂಗಳೂರು.
30. ಎಲ್. ರಾಜಶೇಖರಯ್ಯ
    ಕನ್ನಡ ಅಧ್ಯಾಪಕರು, ಕೆ. ಎಂ. ದೊಡ್ಡಿ
31. ಶ್ರೀಮತಿ ಕೌಸಲ್ಯ, ಟಿ. ನರಸೀಪುರ

ನೀವೂ ಬಳಗದ ಸದಸ್ಯರಾಗಿರಿ

ಸಮಾಜದ ನೊಂದವರೆಲ್ಲರ ದನಿಯಾಗಿ ಪ್ರಕಟವಾಗುತ್ತಿರುವ ಪಂಚಮ ಪತ್ರಿಕೆ ಬಗ್ಗೆ ಕಳಕಳಿಯುಳ್ಳ ಯಾರಾದರೂ ಒಂದು ನೂರು ರೂಪಾಯಿಗಳನ್ನು ಕೊಟ್ಟು ಪಂಚಮ ಬಳಗದಸದಸ್ಯರಾಗಬಹುದು. ಈ ಹಣವನ್ನು ನಿರಂತರ ಚಂದಾ ಎಂದು ಸ್ವೀಕರಿಸಿ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯನ್ನು ಮಾತ್ರ ಪಂಚಮದಪ್ರಕಟಣಾಖರ್ಚಿಗೆಬಳಸುತ್ತೇವೆ. ತಮಗೆ ನಿರಂತರವಾಗಿ 'ಪಂಚಮ'ಪತ್ರಿಕೆ ಕಳುಹಿಸುತ್ತೇವೆ.

ಒಂದು ಪಕ್ಷ ಪಂಚಮ ನಿಂತಲ್ಲಿ ತಾವು ಪಂಚಮಕ್ಕೆ ಕೊಟ್ಟಿರುವ ನೂರು ರೂಪಾಯಿಗಳನ್ನು ಹಿಂತಿರುಗಿಸುತ್ತೇವೆ.

ತಮಗೆ ಆರ್ಥಿಕವಾಗಿ ಭಾರವಾಗದಂಥ ಈ ಪಂಚಮ ಯೋಜನೆಯನ್ನು ಬೆಂಬಲಿಸಿರಿ. ಎಂ. ಓ, ಡಿ.ಡಿ, ಅಥವಾ ಚೆಕ್ ಸ್ವೀಕರಿಸುತ್ತೇವೆ.

ತಮ್ಮನ್ನು ಸ್ವಾಗತಿಸುವ,
ದೇವನೂರ ಮಹಾದೇವ, ವ್ಯವಸ್ಥಾಪಕ ಸಂ.

ನೀರಿನ ಮಾತಿಗೆ ದಲಿತರ ರಕ್ತ ಹರಿಸಿದ ಒಂದು ಊರು

ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 37 ವರ್ಷ ಕಳೆದರೂ ಸಹ ಇನ್ನೂ ದಲಿತರಿಗೆ ಸಾರ್ವಜನಿಕ ಭಾವಿಗಳಲ್ಲಿ, ಗುಡಿ ಗುಂಡಾರುಗಳಲ್ಲಿ, ಚಹದಂಗಡಿಗಳಲ್ಲಿ ಮುಕ್ತ ಪ್ರವೇಶವಿಲ್ಲ. ಇದು ಮಾನವತೆ ಇದ್ದ ಎಲ್ಲರೂ ನಾಚಿತಲೆತಗ್ಗಿಸುವಂತಹದ್ದು. ದಲಿತರ ಉದ್ಧಾರದ ಬಗ್ಗೆ ಮಾತಾಡುವ ಎಲ್ಲ ರಾಜಕೀಯ ಪಕ್ಷಗಳೂ ಮತ್ತವರ ಸರಕಾರಗಳು ಸೂಕ್ತ ರಕ್ಷಣೆ ಕೊಡುವಲ್ಲಿ ವಿಫಲಗೊಂಡಿವೆ. ಇಂತಹ ನಾಚಿಗೇಡಿನ ಘಟನೆಗಳು ದೇಶದ ಉದ್ದಗಲಕ್ಕೂ ದಿನ ನಿತ್ಯ ನಡೆಯುತ್ತಲೇ ಇವೆ. ಇಂಥಹದೇ ಘಟನೆ ಆಳಂದ ತಾಲ್ಲೂಕಿನ ಕೊತನಹಿಪರ್ಗಾ ಗ್ರಾಂದಲ್ಲಿ ಘಟಿಸಿದೆ.

ಹತ್ತು ತಾಲ್ಲೂಕಗಳನ್ನು ಒಳಗೊಂಡಿರುವ ಗುಲಬರ್ಗಾ ಜಿಲ್ಲೆಯು ದತಲಿರು ಸಾಮಾಜಿಕ,ಶೈಕ್ಷಣಿಕ, ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಿ ಸ್ವಾಭಿಮಾನಿಗಳಾಗಿದ್ದಾರೆಂದು ಪ್ರತೀತಿ ಇದೆ. ಈ ಎಲ್ಲ ಶ್ರೇಯಸ್ಸೂ ಆಳಂದಕ್ಕೆ ಸಲ್ಲುವಂತಹದು. ಏಕೆಂದರೆ ಗುಲಬರ್ಗಾದಲ್ಲಿಯ ಎಲ್ಲ ರಂಗದಲ್ಲೂ ಆಳಂದದಪರದೇ ಮೇಲುಗೈ.

ಕೊತನ ಹಿಪರ್ಗಾಗ್ರಾಂವು ಆಳಂದ ಪಟ್ಟಣದಿಂದ ಉತ್ತರಕ್ಕೆ 22 ಕಿ.ಮಿ. ದೂರದಲ್ಲಿ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಒಂದು ಕುಗ್ರಾಮ. ಇಲ್ಲಿಗೆ ಹೋ ಬೇ ಂದರೆ ಸರಳವಾದ ರಸ್ತೆ ಇಲ್ಲ. ಮೋಟಾರುಗಳ ವ್ಯವಸ್ಥೆಯಿಲ್ಲ. ಸುಮಾರು 200 ಮನೆಗಳ ಹೊಂದಿರುವ ಈ ಹಳ್ಳಿಯಲ್ಲಿ ಮರಾಠರದೇ ಹೆಚ್ಚಿನ ಪ್ರಾಬಲ್ಯ, ನಂತರ ಲಿಂಗಾಯಿತರದ್ದು. ಇವರಿಬ್ಬರಲ್ಲಿ ಹೆಚ್ಚಿನ ವ್ಯತ್ಯಾಸಗಳೇನೂ ಇಲ್ಲ. ಸಾಮಾಜಿಕವಾಗಿ ಒಂದೇ ಶ್ರೇಣಿಯವರು. ಆದರೂ ಆಗಾಗ ನಾನೆಚ್ಚು ತಾನೆಚ್ಚು ಎಂದು ಒಳಗೊಳಗೆ ಒಬ್ಬರನೊಬ್ಬರು ದ್ವೇಷಿಸುತ್ತಾ ಇರುತ್ತಾರೆ. ಜಾತಿವಾರು ಮನೆಗಳ ಪಟ್ಟಿ ಮಾಡಿದರೆ ಮರಾಠರೇ ಹೆಚ್ಚಿನ ಸಂಖ್ಯೆಯಲ್ಲಿರುವವರು. ಮರಾಠರ ಮನೆ–80, ಲಿಂಗಾಯಿತರು-30, ಕಬ್ಬಲಿಗರು–15, ಕುರುಬರು-10, ಮುಸ್ಲಿಂರು-3, ಹಜಾಮರು 2, ರಜಪೂತರು–2, ಆಗಸರು-1, ಜಂಗಮರು–4, ಹೂಗಾರು-1, ಗೊಂದಲಿಗರು-1,ಕುಂಬಾರರು-3, ಹೊಲೆಯರು-25, ಮಾದಿಗರು01. ಇವರಲ್ಲಿ ಮರಾಠರು ಮತ್ತು ಲಿಂಗಾಯಿತರು ಜಮೀನುಗಳನ್ನು ಹೊಂದಿಒಕ್ಕಲುತನವನ್ನೇ ಅವರು ಮುಖ್ಯ ಕಸಬು ಮಾಡಿಕೊಂಡಿದ್ದಾರೆ. ಬೆಣ್ಣತೊರೆಯ ಕಾಲುವೆ ನೀರಿನಿಂದಾಗಿ ಇವರ ಒಕ್ಕಲುತನ ಸರಿಯಾಗಿ ನಡಿಯುತ್ತಿದೆ. ಇವರ ಬೆಳೆಗಳೆಂದರೆ ಕಬ್ಬು, ಗೋದಿ, ಜವೆ, ಎಲೆದೋಟ, ರೇಶ್ಮೆ. ಈ ರೀತಿ ವಾಣಿಜ್ಯ ಬೆಳೆಗಳನ್ನೇ ಬೆಳೆದು ಸದಾ ಕೈಯಲ್ಲಿ ಹಣ ಎಣಿಸುತ್ತಾ ಗತ್ತಿನಲ್ಲಿ ತಿರುಗುವವರು. ಉಳಿದ ಜಾತಿಯ ಜನರು ಅವರವರ ಜಾತಿಯ ಕಸುಬನ್ನೇ ಅವರ ಮನೆಯ ಹಿರಿಯರಿಂದ ಮುಂದುವರೆಸಿಕೊಂಡು ಬಂದಿದ್ದಾರೆ. ಹೀಗಾಗಿ ಅವರದು ಜೀವನ ಸರಾಗವಾಗಿ ಸಾಗಿ ಬರುತ್ತಿದೆ.ಉದಾಹರಣೆಗಾಗಿ-ಹಜಾಮರುಕಟಿಂಗ್ ಮಾಡುವರು, ಹೂಗಾರು : ಮನೆಗಳಿಗೆ ಪೂಜೆಗೆಂದು ಹೂ ಹಾಕೋದು, ಹೂವಿನ ಹಾರ, ದಂಡೆ ಕಟ್ಟಿಕೋಡೊದು, ಕುಂಬಾರರು : ಗಡಿಗೆ ಮಡಿಕೆ ಮಣ್ಣಿನ ಪಾತ್ರೆಗಳನ್ನು ಮಾಡಿಮಾರೋದು. ಈ ರೀತಿಯಾಗಿ ತಮ್ಮ ಮನೆತನದ ಕುಲಕಸುಬನ್ನೇ ಆಶ್ರಯಿಸಿಕೊಂಡು ಬರುತ್ತಿದ್ದಾರೆ. ಅವರದು ಅಷ್ಟ ಕಷ್ಟೇ ಬದುಕು ಸಾಗುತ್ತಿದೆ.ಈ ಎಲ್ಲ ಕಸಬು

ವಿಶೇಷ ವರದಿ

ಬಸಣ್ಣ ಸಿಂಗೆ

ದಾರರಿಗೆ ಜಮಿನದಾರರು ವರ್ಷಕ್ಕೆ ಇಂತಿಷ್ಟು ಎಂದು ನಿಗಧಿಮಾಡಿದ ಕಾಳು ಕಡ್ಡಿಗಳನ್ನು ಅವರೆರಾಗಿಯನ್ನು ಕೊಡುತ್ತಾರೆ.ತಮ್ಮ ಮನೆಯಲ್ಲಿ ಹಿರಿಯರಿಂದ ಯಾವುದೇ ನಿರ್ದಿಷ್ಟ ಕೆಲಸ ಇಲ್ಲದವರಾದ ಹೊಲೆಯರು ಕೂಲಿಯನ್ನೇ ಮಾಡುತ್ತಾರೆ. ಅವರಿಗೆ ತಮ್ಮದೇ ಜಮಿನಿಲ್ಲ ಇರಲು ಮನೆಯೂ ಇಲ್ಲ. ಇವೇನೇ ಇಲ್ಲದಿದ್ದರೂ ದಲಿತರಲ್ಲಿ ಸ್ವಾಭಿಮಾನ ಪ್ರಜ್ಞೆ ಇದೆ. ಕಾರಣವೆಂದರೆ ಬಹುಷಃ ಮಹಾರಾಷ್ಟ್ರದ ಗಡಿಯಲ್ಲಿ ಅವರ ಊರು ಇದ್ದಿರುವುದೇ ಕಾರಣವಾಗಿರಬಹುದು. ಆದಕ್ಕಾಗಿಯೇ ಅವರು ತಮ್ಮ ಜಾತಿಯಲ್ಲಿ ನಡೆದು ಬಂದ ಅನಿಷ್ಟ ಪದ್ಧತಿಗಳನ್ನು ನಿರಾಕರಿಸಿದ್ದಾರೆ. ಅವುಗಳೆಂದರೆ, ಸವರ್ಣಿಯರು ಯಾರಾದರೂ ಸತ್ತರೆ ಆ ಸುದ್ದಿಯನ್ನು ತಲುಪಿಸೋದು, ಅವರಲ್ಲಿದ್ದ ದನಕರುಗಳು ಸತ್ತರೆ ಅವುಗಳನ್ನು ಎತ್ತಿ ಊರ ಹೊರಗೆ ಸಾಗಿಸಿಕೊಂಡು ಹೋಗಿ ಬಿಸಾಕೋದು, ಅವರ ಮನೆಗಳನ್ನು ಸಾರಿಸಿ ಸುಚಿಯಾಗಿಡೋದು,ಕಟ್ಟಿಗೆ ಒಡೆದು ಕೊಡೊದು,ಜಾತ್ರೆಗಳಲ್ಲಿ ಹಬ್ಬಹರಿದಿನಗಳಲ್ಲಿ ಪುಕ್ಕಟೆ ಬಿಟ್ಟಿ ಕೆಲಸ ಮಾಡಬರೋದು, ಇಂತಹದೇ ಅನೇಕ ಕೆಟ್ಟಪದ್ಧತಿಗಳನ್ನು ನಿಲ್ಲಿಸಿಬಿಟ್ಟರು. ಡಾ॥ ಅಂಬೇಡ್ಕರ್ ಜಯಂತಿಯನ್ನು ಮಾಡಲು ಪ್ರಾರಂಭಿಸಿದರು. ಮತ್ತಷ್ಟು ಸ್ವಾಭಿಮಾನದ ಪ್ರಜ್ಞೆ ಮೂಡಲು ಪ್ರಾರಂಭಿಸಿತು.

ಡಾ॥ ಅಂಬೆಡ್ಕರ್ ಜಯಂತಿಯಿಂದ ಮತ್ತವರ ವಿಚಾರಗಳಿಂದ ಪ್ರಭಾವಗೊಂಡು ಗುಲಬರ್ಗಾದಲ್ಲಿ ಮೇಲು ಕೀಳುಗಳ ಜಾತಿಯತೆಯ ಅನುಭವ ಇಲ್ಲದೆ ಹಾಸ್ಟೇಲಲ್ಲಿ ಜೀವನ ನಡೆಸಿದ ಜೈಭೀಮ ಎಂಬ ಅದೇ ಉರಿನ ದಲಿತ ವಿದ್ಯಾರ್ಥಿ ಸರಕಾರ ಹೊಡೆಸಿದ ಬೋರವೆಲ್‌ನಿಂದ ನೀರು ಕುಡಿದಿದ್ದಕ್ಕೆ ಊರಿನ ಜಾತ್ಯಾಂಧ ಸವರ್ಣಿಯರು 1-4-84 ರಂದು ಸಕತ್ತಾಗಿ ಥಳಿಸಿದರು. ಜಯಭೀಮ ತನ್ನಣ್ಣ ಪ್ರಕಾಶನ ಜೊತೆಗೆ ಕೂಡಿಕೊಂಡು 6-4-84 ರಂದು ಆಳಂದ ಪೋಲಿಸ್ ಸ್ಟೇಶನಕ್ಕೆ ಹೋಗಿ ದೂರು ಸಲ್ಲಿಸಿದರು. ನಮಗೆ ಬೊರವೆಲ್‌ನಿಂದ ನೀರು ತೆಗೆದುಕೋಳ್ಳುವಂತೆ ಆಗಬೇಕೆಂದು ಪೋಲೀಸರಿಗೆ ಕೇಳಿಕೊಂಡರು. ಏನೂ ಪ್ರಯೋಜನ ಆಗಲಿಲ್ಲ. ಇದಾದ ಮೇಲೆ ಎರಡು ಮೂರುಸಲ ಪ್ರಕಾಶ ಎಂಬ ದಲಿತ ಉತ್ಸಾಹಿ ಯುವಕ ಹೇಳಿದರೂ ಪೋಲೀಸ್ ದಪ್ಪಕಿವಿಗಳಿಗೆ ತಾಗಲಿಲ್ಲ. ನೀರಿಗಾಗಿ ಕಷ್ಟ ಪಡುತ್ತಿರುವ ದಲಿತರು ನಿರುಪಾಯರಾಗಿ ಪೋಲಿಸ ಹಿರಿಯ ಅಧಿಕಾರಿಗಳಾದ IGP, DIG,ಮತ್ತು CRE Sellಗೆ ನೀರು ಕೊಡಿಸುವಂತೆ ಬೇಡಿಕೊಂಡು ದಿನಾಂಕ 27–9–84ರಂದು ಅರ್ಜಿಕೊಟ್ಟರು.

ಅವರ ಮೇಲಾಧಿಕಾರಿಯಿಂದ ಆದೇಶ ಬಂದಿದ್ದರಿಂದಲೋ ಏನೋ ಆಳಂದ ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್ ಕೊತನಹಿಪರ್ಗಾ ಗ್ರಾಂಕ್ಕೆ ದಿ॥ 20–10–84ರಂದು ಬೆಟ್ಟಿಕೊಟ್ಟು ದಲಿತರಿಗೆ ಬೋರ್‌ವೆಲ್‌ನಿಂದ ನೀರು ತೆಗೆದುಕೊಂಡು ಹೋಗಿರೆಂದು ಹೇಳಿದರು. ಅಲ್ಲಿದ್ದ ದಲಿತರು, ಊರಿನ ಸವರ್ಣಿಯರೂ ಹೇಳಿದ ನಂತರ ತೆಗೆದುಕೊಂಡು ಹೋಗುತ್ತೇವೆ ಅವರಿಂದಲೂ ಹೇಳಿಸಿ ಹೋಗಿರೆಂದು ಹೇಳಿದಾಗ, ಸವರ್ಣಿಯರು ಸಹ ಸರ್ಕಲ್ ಇನ್ಸ್‌ಪೆಕ್ಟರ ಅಲ್ಲಿದ್ದರಿಂದಲೋ ಏನೋ ನಮ್ಮ ಅಭ್ಯಂತರ ಏನೂ ಇಲ್ಲೆಂದು ತಿಳಿಸಿದರು. ನೀರು ತೆಗೆದುಕೊಂಡು ಹೋಗಲು ಒಪ್ಪಿದ ದಲಿತರು ನಾಳೆಯಿಂದ ಬೋರ್‌ವೆಲ್‌ನಿಂದ ನೀರು

ಬಿಡುಗಡೆಯ ದಾರಿ ಯಾವುದು ? – ೨

(ಅಕ್ಟೋಬರ್ 15ರ ಸಂಚಿಕೆಯಿಂದ ಮುಂದುವರಿದುದು)

ಧರ್ಮದ ವ್ಯಾಖ್ಯಾನಕ್ಕಿಂತ ಈ ಪ್ರಶ್ನೆ ಬಹು ಮುಖ್ಯ. ಏಕೆಂದರೆ ಮನುಷ್ಯನಿಗೆ ಬೇಕಾಗಿರುವ ಧರ್ಮವು ಕೇವಲ ವ್ಯಾಖ್ಯಾನವನ್ನು ಮಾತ್ರ ಅವಲಂಬಿಸಿಕೊಂಡು ಕುಳಿತಿಲ್ಲ. ಸಮಾಜವನ್ನು ಕಟ್ಟುಪಾಡಿಗೊಳಪಡಿಸಿಅದನ್ನಾಳುವ ನಿಯಮಗಳ ಗುರಿ ಮತ್ತು ಸ್ವರೂಪಗಳನ್ನು ಅವಲಂಬಿಸಿದೆ. ಧರ್ಮದ ವಾಸ್ತವ ಸ್ವರೂಪ ಏನು ? ಈ ಪ್ರಶ್ನೆಯನ್ನು ಬಿಡಿಸುವಾಗ ಇನ್ನೊಂದು ಪ್ರಶ್ನೆ ಉಂಟಾಗುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವಣ ಸಂಬಂಧ ಹೇಗಿರಬೇಕು ?

ಆಧುನಿಕ ಸಮಾಜ ವಿಜ್ಞಾನಿಗಳು ಈ ಪ್ರಶ್ನೆಗೆ ಮೂರು ಬಗೆಯ ಉತ್ತರಗಳನ್ನು ನೀಡಿದ್ದಾರೆ. ಅವರಲ್ಲಿ ಕೆಲವರು ವ್ಯಕ್ತಿಗೆ ಸುಖ ಸಂತೋಷಗಳನ್ನು ತರುವುದೇ ಸಮಾಜದ ಅಂತಿಮಗುರಿ ಎಂತಲೂ ಇನ್ನು ಕೆಲವರು ಸಮಾಜ ಬದುಕಿರುವುದೇ ವ್ಯಕ್ತಿಯಲ್ಲಡಗಿರುವ ಅಸಂಗತ ಗುಣ ಮತ್ತು ಸಾಮರ್ಥ್ಯಗಳನ್ನು ವೃದ್ಧಿಸಿ ಅವನ ವ್ಯಕಿತ್ವ ಬೆಳೆಯುವಂತೆ ಮಾಡುವುದಕ್ಕಾಗಿ ಎನ್ನುತ್ತಾರೆ. ಮತ್ತೆ ಕೆಲವರು ಸಾಮಾಜಿಕ ವ್ಯವಸ್ಥೆಯ ಪ್ರಧಾನಗುರಿ ವ್ಯಕ್ತಿಯ ಸುಖ ಸಂತೋಷ ಅಥವಾ ಅವನ ಪ್ರಗತಿಯಾಗಲಿ ಅಲ್ಲ. ಆದರೆ ಆದರ್ಶ ಸಮಾಜವೊಂದನ್ನು ನಿರ್ಮಾಣ ಮಾಡುವುದಾಗಿದೆ. ಹಿಂದೂ ಸಮಾಜದಲ್ಲಿ "ವ್ಯಕ್ತಿ"ಗೆ ಸ್ಥಾನವಿಲ್ಲ ಹಿಂದೂ ಧರ್ಮವು ವರ್ಗಕಲ್ಪನೆಯ ಆಧಾರದ ಮೇಲೆ ರಚಿತವಾಗಿದೆ. ಈ ಧರ್ಮ, ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ಬೋಧಿಸುವುದಿಲ್ಲ. ಯಾವ ಧರ್ಮವು ವ್ಯಕ್ತಿಯನ್ನು ಮಾನ್ಯ ಮಾಡುವುದಿಲ್ಲವೊ ಅಂಥದನ್ನು,ವೈಯಕ್ತಿಕ, ವಾಗಿ ನಾನು ಒಪ್ಪುವುದಿಲ್ಲ. ಸಮಾಜ ವ್ಯವಸ್ಥೆಯು ವ್ಯಕ್ತಿಗೆ ಅತ್ಯವಶ್ಯವಾದರೂ ಕೂಡ ಸಮಾಜ ಕಲ್ಯಾಣ ಮಾತ್ರವೇ ಧರ್ಮದ ಅಂತಿಮ ಗುರಿಯಲ್ಲ.

ನನ್ನ ಪ್ರಕಾರ ವ್ಯಕ್ತಿಯ ಶ್ರೇಯಸ್ಸು ಮತ್ತು ಪ್ರಗತಿ ಇವುಗಳು ಧರ್ಮದ ನೈಜ ಗುರಿಯಾಗಿರಬೇಕು. ವ್ಯಕ್ತಿಯು ಸಮಾಜದ ಒಂದು ಭಾಗವಾಗಿದ್ದಾನೆ. ಆದಾಗ್ಯೂ ಸಮಾಜಕ್ಕೂ ವ್ಯಕ್ತಿಗೂ ಇರುವ ಸಂಬಂಧವು ದೇಹ ಮತ್ತದರ ಅವಯವಗಳಿಗಿರುವ ಸಂಬಂಧದಂತೆ. ಅಥವಾ ರಥಕ್ಕೂ ಚಕ್ರಕ್ಕೂ ಇರುವ ಸಂಬಂಧದಂತೆ ಅಲ್ಲ.

ಸಮಾಜ ಮತ್ತು ವ್ಯಕ್ತಿ : ಸಮುದ್ರಕ್ಕೆ ಬಿದ್ದೊಂದು ನೀರಹನಿ ಆ ಜಲರಾಶಿಯಲ್ಲಿ ಲೀನವಾಗುವ ತೆರದಲ್ಲಿ, ಮನುಷ್ಯನು ಸಮಾಜದಲ್ಲಿಯೇ ಬದುಕುತ್ತಿರುವಾಗ್ಯೂ ಆ ಸಮಷ್ಠಿಯಲ್ಲಿ ಕರಗಿ ಹೋಗಲಾರ.ಮನುಷ್ಯಜೀವನ ಸ್ವತಂತ್ರವಾದದು. ವ್ಯಕ್ತಿಯು ಸಮಾಜದ ಸೇವೆಗಾಗಿಯೇ ಹುಟ್ಟಲಿಲ್ಲ. ತನ್ನ ಸ್ವ–ಅಭಿವೃದ್ಧಿಗಾಗಿ ಅತ ಜನಿಸಿದ. ಇದೇ ಕಾರಣ ನಾಗರಿಕ ರಾಷ್ಟ್ರಗಳಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಗುಲಾಮನನ್ನಾಗಿಸಲಾರ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಯಾವ ಧರ್ಮವು ಮನುಷ್ಯನಿಗೆ ಪ್ರಾಶಸ್ತ್ಯ ನೀಡುವುದಿಲ್ಲವೊ ಅದನ್ನು ಮಾನ್ಯ ಮಾಡಲಾಗದು. ಹಿಂದೂತ್ವವು ಮನುಷ್ಯನ ಪ್ರಾಮುಖ್ಯತೆಯನ್ನು ಮನ್ನಿಸುವುದಿಲ್ಲ. ಹಾಗಾಗಿ ಅದನ್ನು ನಾನು ಒಪ್ಪುವುದಿಲ್ಲ. ಯಾವುದೋ ಒಂದೇ ವರ್ಗ ಜ್ಞಾನ ಸಂಪಾದಿಸುವುದು ಇನ್ನೊಂದು ವರ್ಗ ಶಸ್ತ್ರಾಸ್ತ್ರಗಳ ಹಕ್ಕು ಪಡೆಯುವುದು. ಮತ್ತೊಂದು ವ್ಯಾಪಾರ ವಾಣಿಜ್ಯೋದ್ಯಮಗಳನ್ನು ಮಾಡುವುದು, ಮಗದೊಂದು ಸೇವೆಗಾಗಿ ಮಾತ್ರ ಮೀಸಲಾಗಿರುವುದು–ಇಂಥ ವ್ಯವಸ್ಥೆಯನ್ನು ಹೊಂದಿರುವ ಹಿಂದೂ

ಅಂಬೇಡ್ಕರ್ ವೇದಿಕೆ


ಅನು : ಗುರುರಾಜ್ ಬೀಡಿಕರ್

ಧರ್ಮವನ್ನು ನಾನು ಒಪ್ಪುವುದಿಲ್ಲ. ಪ್ರತಿಯೊಬ್ಬರಿಗೂ ಜ್ಞಾನಬೇಕು, ಪ್ರತಿಯೊಬ್ಬರಿಗೂ ಶಸ್ತ್ರಾಸ್ತ್ರಬೇಕು, ಪ್ರತಿಯೊಬ್ಬರಿಗೂ ಹಣಬೇಕು. ಇದನ್ನು ಬಿಟ್ಟು ಕೆಲವೇ ಕೆಲವರಿಗೆ ಜ್ಞಾನಕೊಟ್ಟು ಮಿಕ್ಕೆಲ್ಲರನ್ನು ಅಜ್ಞಾನದ ಕತ್ತಲಲ್ಲಿಡುವುದು ಧರ್ಮವಲ್ಲ. ಅದು ಕೇವಲ ಜನತೆಯನ್ನು ಮಾನಸಿಕವಾಗಿ ದಾಸ್ಯದಲ್ಲಿಡುವ ಸಂಚು ಅಷ್ಟೆ. ಕೆಲವರಿಗೆ ಮಾತ್ರ ಶಸ್ತ್ರಕೊಟ್ಟು, ಹಲವರನ್ನು ನಿಶ್ಶಸ್ತ್ರರಾಗಿಸುವುದು ಬರಿ ತಂತ್ರ. ಆ ಹಲವರನ್ನು ಪಾರಂಪರ್ಯ ದಾಸ್ಯದಲ್ಲಿಡುವ ಹುನ್ನಾರ. ಯಾವುದು ಕೆಲವರಿಗೆ ಮಾತ್ರ ಸಂಪತ್ತು ಕೊಟ್ಟು ಇನ್ನಿತರರು ಯಾವಾಗಲೂ ಆ ಕೆಲವರನ್ನೇ ಸದಾ ತಮ್ಮ ನಿತ್ಯ ಅಗತ್ಯಗಳಿಗೂ ಸಹ ಅವಲಂಬಿಸಿಕೊಂಡಿರುವಂತೆ ಒತ್ತಾಯ ಹೇರುತ್ತದೆಯೋ ಅದು ಧರ್ಮವಲ್ಲ.

ಇದನ್ನೆ ಹಿಂದೂ ಧರ್ಮದಲ್ಲಿನ ಚಾತುರ್ವರ್ಣ್ಯ ಎಂದು ಕರೆಯಲಾಗುತ್ತದೆ. ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ಹಿಂದೂ ಧರ್ಮ ಹಿತಕರವೆ ಎಂಬುದನ್ನು ನೀವೇ ಈಗ ಯೋಚಿಸಬೇಕು. ಧರ್ಮವೊಂದರ ಮೂಲ ಉದ್ದೇಶ ವ್ಯಕ್ತಿಯ ಅತ್ಮೋನ್ನತಿಗೆ ತಕ್ಕ ಸನ್ನಿವೇಶವನ್ನು ಸೃಷ್ಠಿಸುವುದು. ಈ ಮಾತನ್ನು ಒಪ್ಪುವುದಾದರೆ ಹಿಂದೂತ್ವದಲ್ಲಿ ನಿಮ್ಮ ಉನ್ನತಿ ಸಾಧ್ಯವಿಲ್ಲ ಎಂಬುದು ಸುಸ್ಪಷ್ಟ. ಹಿಂದೂ ಧರ್ಮದಲ್ಲಿ ನಿಮ್ಮ ಬಗೆಗೇನಾದರೂ ಅನುಕಂಪವಿದೆಯೇ ? ಸಹಾನುಭೂತಿ ಮಟ್ಟಿಗೆ ಹೇಳುವುದಾದರೆ, ಅದು ಅಲ್ಲಿಲ್ಲ. ನೀವೆಲ್ಲಿಗೇ ಹೋದರೂ ನಿಮ್ಮ ಕಡೆ ಯಾರೂ ಸಹಾನಭೂತಿಯಿಂದ ನೋಡಲಾರರು. ನಿಮ್ಮೆಲ್ಲರಿಗೂ ಆ ಬಗ್ಗೆ ಗಾಢವಾದ ಅನುಭವವಿದೆಯಷ್ಟೆ. ಹಿಂದೂಗಳಿಗೆ ನಿಮ್ಮ ಕುರಿತು ಸೋದರ ಭಾವನೆಯಿಲ್ಲ. ಪರದೇಶಿಗಳಿಗಿಂತ ಕಡೆಯಾಗಿ ನಿಮ್ಮ ಉಪಚರಿಸಲಾಗುತ್ತದೆ. ಗ್ರಾಮೀಣ ನೆರೆಹೊರೆಯಲ್ಲಿ ಬದುಕುವ ಹಿಂದೂಗಳಿಗೂ ಅಸ್ಪೃಶ್ಯರಿಗೂ ನಡುವಿರುವ ಸಂಬಂಧಗಳನ್ನು ನೋಡಿದರೆ ಯಾರೂ ಅವರನ್ನು ಅಣ್ಣ–ತಮ್ಮಂದಿರು ಎನ್ನಲಾರರು. ಬದಲಾಗಿ ಅವರನ್ನು ರಣರಂಗದಲ್ಲಿ ಶತ್ರು ಪಾಳಯದವರೆಂದುಹೇಳಬಹುದು.ಹಿಂದೂಗಳು ಮುಸ್ಲಿಮರಬಗ್ಗೆ ಹೊಂದಿರುವ ಕನಿಷ್ಠ ಮಟ್ಟದ ಆಪ್ತತೆಯನ್ನೂ ಕೂಡ ನಿಮ್ಮ ಬಗ್ಗೆ ಹೊಂದಿಲ್ಲ. ಮುಸ್ಲಿಮರನ್ನು ನಿಮಗಿಂತ ಹತ್ತಿರದವರೆಂದು ಹಿಂದೂಗಳು ಭಾವಿಸುತ್ತಾರೆ. ಹಿಂದೂ ಮುಸ್ಲಿಮರು ಸ್ಥಳೀಯ ಸಂಸ್ಥೆಗಳು, ವಿಧಾನ ಸಭೆಗಳು ಮತ್ತು ವ್ಯಾಪಾರೋದ್ಯಮಗಳಲ್ಲಿ ಪರಸ್ಪರ ಸಹಕಾರಿಯಾಗಿದ್ದಾರೆ. ಆದರೆ ಹಿಂದೂಗಳು ನಿಮಗೆ ಸಹಾನುಭೂತಿ ತೋರಿದ ಒಂದೇ ಒಂದು ಘಟನೆಯಾದರೂ ಇದೆಯೆ ? ಬದಲಾಗಿ ಅವರು ಯಾವಾಗಲೂ ಮನಸ್ಸಿನಲ್ಲಿ ನಿಮ್ಮ ಬಗ್ಗೆ ದ್ವೇಷಾಸೂಯೆಗಳನ್ನೇ ಬೆಳೆಸಿಕೊಳ್ಳುತ್ತಾರೆ. ಈ ದ್ವೇಷ ಸಾಧನೆಯು ಎಂತೆಂಥ ಭಯಾನಕ ಪರಿಣಾಮಗಳನ್ನುಂಟು ಮಾಡಿದೆ ಎಂಬುದನ್ನು ನೀವು ಆ ವಿಷಯವಾಗಿ ಕೋರ್ಟಿಗೂ ಅಥವಾ ಪೋಲೀಸ್ ಸ್ಟೇಶನ್ನಿಗೂ ಹೋದವರಿಂದ ಕೇಳಿ ತಿಳಿಯಬೇಕಾಗಿದೆ. ಕೋರ್ಟು ನ್ಯಾಯ ನೀಡುತ್ತದೆ, ಪೋಲೀಸರು ನ್ಯಾಯ ನಿಷ್ಪಕ್ಷರಾಗಿ ವರ್ತಿಸುತ್ತಾರೆ ಎಂದು ನಿಮ್ಮಲ್ಲಿ ಒಬ್ಬನೇ ಒಬ್ಬನಾದರೂ ಹೇಳಬಲ್ಲಿರಾ ? ಇಲ್ಲವೆಂದಾದಲ್ಲಿ


ಮಾರೀಚ ಮಾಯೆ ಚಿನ್ನದ ಜಿಂಕೆ

[೨]



ವಿಶ್ಲೇಷಣೆ–5

ಲಕ್ಷ್ಮಣನ ಮಾತುಗಳಿಗೆ ಅಡ್ಡ ಬಂದು, ಸೀತೆ ಮುಗುಳ್ನಗುತ್ತಾ, ಆ ಜಿಂಕೆಯ ಚರ್ಮದಿಂದ ಹೃತಚೇತನಳಾಗಿ, ರಾಮನನ್ನು ಕುರಿತು "ಹೇ ಆರ್ಯಪುತ್ರ, ಸುಂದರವಾದ ಆ ಮೃಗವು ನನ್ನ ಮನಸ್ಸನ್ನು ಅಪಹರಿಸುತ್ತಿದೆ ; ಹೇ ಮಹಾಭುಜ ಬಲವುಳ್ಳವನೆ (ಹೇ ಮಹಾಬಾಹೋ) ಆ ಮೃಗವನ್ನು ನಮ್ಮ ಕ್ರೀಡಾರ್ಥವಾಗಿ ತೆಗೆದುಕೊಂಡು ಬಾ.... ತೇಜಸ್ಸು, ಶಾಂತಿ, ದೇಹಶಾಂತಿಯಿಂದ ಕೂಡಿದ ಇಂಥ ಶ್ರೇಷ್ಠ ಮೃಗಕ್ಕೆ ಸಮಾನವಾದದ್ದನ್ನು ಮತ್ತೊಂದನ್ನು ನಾನು ನೋಡಿಲ್ಲ. ನಾನಾವರ್ಣಗಳಿಂದ ಕೂಡಿದ, ವಿಚಿತ್ರವಾದ ಅಂಗಗಳುಳ್ಳ, ರತ್ನಬಿಂದುಗಳಿಂದ ತುಂಬಿರುವ, ಚಂದ್ರನಿಗೆ ಸಮಾನವಾದ ಈ ಮೃಗವು ಅರಣ್ಯವನ್ನು ಬೆಳಗುತ್ತಿದೆ.... ಈ ಶ್ರೇಷ್ಠ ಮೃಗವು ನಿನ್ನ ಕೈಗೆ ಜೀವಂತವಾಗಿ ಸಿಕ್ಕದೆ ಹೋದರೆ, ಹೇ ಪುರುಷಶ್ರೇಷ್ಠನೆ (ಹೆ ನರಶಾರ್ದೂಲ) ನೀನು ಹೊಡೆದು ತರುವ ಆ ಮೃಗದ ಸುವರ್ಣಮಯ ಚರ್ಮವನ್ನು ದರ್ಭಾಸನದ ಮೇಲೆ ಹಾಕಿಕೊಂಡು ಕುಳಿತುಕೊಳ್ಳ ಬಯಸುತ್ತೇನೆ. ಹೆಂಗಸರಿಗೆ ಇಂಥ ಕಾಮು ವೃತ್ತ (ಇದಂ ಕಾಮು ವೃತ್ತಂ) ಯೋಗ್ಯವಲ್ಲ ; ಆದರೆ ಆ ಮೃಗದ ಶರೀರ ನನ್ನಲ್ಲಿ ವಿಸ್ಮಯ ಹುಟ್ಟಿಸಿರುವ ಕಾರಣ ಅದನ್ನು ಇಚ್ಛೈಸುತ್ತಿದ್ದೇನೆ" ಎಂದು ಹೇಳಿದಳು. ರಾಮನು ಸೀತೆಯ ಮಾತುಗಳಿಂದ ಪ್ರೇರಿತನೂ ಆ ಮೃಗದ ರೂಪದಿಂದ ಲೋಭಗೊಂಡವನೂ ಆಗಿ, ಭ್ರಮೆಗೊಂಡನು. ಲಕ್ಷ್ಮಣನನ್ನು ಕುರಿತು ರಾಮನು, "ವೈದೇಹಿಗೆ ಈ ಮೃಗದ ಮೇಲೆ ಎಂಥ ಬಯಕೆಯಾಗಿದೆ ನೋಡು. ಇಂಥ ಮೃಗ ಇಂದ್ರನ ನಂದನವನದಲ್ಲಾಗಲಿ, ಕುಬೇರನ ಚೈತ್ರರಥವೆಂಬ ಉದ್ಯಾನದಲ್ಲಾಗಲಿ ಇಲ್ಲವೆಂದ ಮೇಲೆ, ಈ ಭೂಮಿಯಲ್ಲಿ ಬೇರೆ ಎಲ್ಲಿಂದ ಬರಬೇಕು. ಪ್ರತಿಲೋಮ ಅನುಲೋಮವಾಗಿ ಬೆಳೆದಿರುವ ಮನೋಹರವಾದ ರೋಮಗಳು ಚಿನ್ನದ ಚುಕ್ಕೆಗಳಿಂದ ಹೊಳೆಯುತ್ತಿವೆ. ಆಕಳಿಸುವ ಅದರ ಬಾಯಿಂದ ಅಗ್ನಿಜ್ವಾಲೆಯಂತೆ ಹೊರಬರುತ್ತಿರುವ ಅದರ ನಾಲಗೆ, ಮೇಘದಿಂದ ಹೊರಬರುವ ಮಿಂಚಿನಂತಿದೆ. ಇಂದ್ರನೀಲದ ಬಟ್ಟಲಿನಂಥ ಬಾಯಿ, ಶಂಖಾಕಾರದ, ಮುತ್ತುಗಳಿಗೆ ಸಮಾನವಾದ ಹೊಟ್ಟೆ— ಇಂಥ ಜಿಂಕೆಯು ಯಾವ ಪುರುಷನ ಮನಸ್ಸನ್ನು ಲೋಭಗೊಳಿಸದೆ ಇದ್ದೀತು !.... ಎಲೈ ಲಕ್ಷ್ಮಣನೆ, ಅಪೂರ್ವ ವಸ್ತುವನ್ನು ಬಯಸುವ ಪುರುಷನು ಅದನ್ನು ಅರ್ಥಸಾಧಕಪ್ರಯತ್ನದಿಂದ ಪಡೆಯಲು ಯತ್ನಿಸುತ್ತಾನೆ ; ಅದನ್ನೆ ಅರ್ಥಶಾಸ್ತ್ರಜ್ಞರು 'ಅರ್ಥ' ಎನ್ನುತ್ತಾರೆ. ಈ ಮೃಗ ಅಂಥ ವಸ್ತುಗಳಲ್ಲಿ ಒಂದಾಗಿದೆ. ಆದ್ದರಿಂದ ಅದನ್ನು ಸಂಪಾದಿಸಬೇಕೆಂಬ ಅಪೇಕ್ಷೆ ನನಗಾಗಿದೆ ; ಆ ಶ್ರೇಷ್ಠ ಮೃಗದ ಬಂಗಾರದ ಚರ್ಮ (ಕಾಂಚನ ತ್ವಚೀ) ದಲ್ಲಿ, ಸುಮಧ್ಯಮೆಯಾದ ಸೀತೆಯು ನನ್ನೊಂದಿಗೆ (ಮಯೂಸಹ) ಕುಳಿತುಕೊಳ್ಳುತ್ತಾಳೆ.... ಆಗಸದಲ್ಲಿನ ನಕ್ಷತ್ರರೂಪವಾದ ಮೃಗಶೀರ್ಷ, ಮತ್ತು ಭೂಮಿಯ ಮೇಲಿರುವ ಈ ಮೃಗ, ಈ ಎರಡೇ ಶ್ರೇಷ್ಠ ಮೃಗಗಳು.... ನೀನೆಂದಂತೆ ಇದು ಮಾರೀಚಮಾಯೆಯಾಗಿದ್ದರೆ, ಅದನ್ನು ವಧಿಸುವುದು ನನ್ನ ಕರ್ತವ್ಯ;.... ಎಲೈ ಲಕ್ಷ್ಮಣನೆ (ರಘುನಂದನ), ನೀನು ಸನ್ನದ್ಧನಾಗಿ ಮೈಥಿಲಿಯನ್ನು ರಕ್ಷಿಸು ಈ ಮೃಗವನ್ನು ಸಂಹರಿಸಿಯಾದರೂ, ಹಿಡಿದುಕೊಂಡಾದರೂ ಬರುತ್ತೇನೆ ; ಸೀತೆಗೆ ಈ ಜಿಂಕೆಯ ಚರ್ಮದ ಮೇಲೆ ಅತಿಯಾದ ಆಸೆಯಾಗಿದೆ; ಜಿಂಕೆಯನ್ನು ಒಂದೇಬಾಣದಿಂದ ಹೊಡೆದು, ಕ್ಷಣಮಾತ್ರದಲ್ಲಿ ಅದರ ಚರ್ಮವನ್ನು ತೆಗೆದುಕೊಂಡು ಬಂದು ಬಿಡುತ್ತೇನೆ. ಎಲೈ ಲಕ್ಷ್ಮಣ, ಸಮರ್ಥನೂ, ಅತಿಬಲನೂ, ಪ್ರಜ್ಞಾವಂತನೂ ಆದ ಜಟಾಯುವಿನೊಂದಿಗೆ, ಪ್ರತಿಕ್ಷಣದಲ್ಲಿಯೂ, ಎಲ್ಲೆಡೆಗಳಿಂದಲೂ ಸಂಶಯಗೊಳ್ಳುತ್ತಾ, ಮೋಸಹೋಗದೆ, (ಅಪ್ರಮತ್ತಃ) ಮೈಥಿಲಿಯನ್ನು ಸಂರಕ್ಷಿಸುತ್ತಿರು"— ಎಂದು ಹೇಳಿದನು.


ಎಚ್. ಎಂ. ಚನ್ನಯ್ಯ

ಈ ಪ್ರಕಾರವಾಗಿ ಮಹಾಪರಾಕ್ರಮಿ (ಮಹಾತೇಜಾ) ಯಾದ ರಘುನಂದನನು, ತಮ್ಮನಾದ ಲಕ್ಷ್ಮಣನಿಗೆ ಆಜ್ಞಾಪಿಸಿ, ಭಂಗಾರದ ಹಿಡಿಯ ಖಡ್ಗಧರಿಸಿ, ಧನುಸ್ಸನ್ನು ಹಿಡಿದು, ಎರಡು ಬತ್ತಳಿಕೆಗಳನ್ನು ಕಟ್ಟಿಕೊಂಡು ತೆರಳಿದನು.

ಜಿಂಕೆಯನ್ನಟ್ಟಿಕೊಂಡು ಹೊರಟ ರಾಮನನ್ನು, ಜಿಂಕೆಯ ರೂಪದ ಮಾರೀಚನು, ಸಿಕ್ಕೂಸಿಕ್ಕದವನಂತೆ ವಂಚಿಸುತ್ತಾ, ರಾಮನನ್ನು ಶ್ರಮಗೊಳಿಸಿದನು. ಆಗ, ಕೋಪದಿಂದ ಪರಾಕ್ರಮಿ (ಮಹಾತೇಜಃ) ಯಾದ ರಾಮನು, ಆ ಮೃಗವನ್ನು ಕೊಲ್ಲಲು ಮನಸ್ಸುಮಾಡಿ, ಕೋಪಿಷ್ಠನಾಗಿ, ಸೂರ್ಯನಂತೆ ಹೊಳೆಯುವ ಬಾಣವನ್ನೆತ್ತಿ ಬಲಶಾಲಿ (ಬಲೀ)ಯಾದ ರಾಮನು ಬಿಲ್ಲನಲ್ಲಿ ಸೇರಿಸಿ ಬಲವಾಗಿ ಎಳೆದು, ಆ ಮೃಗವನ್ನು ಉದ್ದೇಶಿಸಿ, ನಿಟ್ಟುಸಿರು ಬಿಡುತ್ತಿರುವ ಹಾವಿನಂತಿರುವ (ಶ್ವಸಂತಂ ಪನ್ನಗಮಿವ), ಬ್ರಹ್ಮನಿರ್ಮಿತವಾದ, ದೀಪ್ತವಾದ, ಜ್ವಲಂತವಾದ ಅಸ್ತ್ರವನ್ನು ಬಿಟ್ಟನು. ಅದು ಮೃಗರೂಪದ ಮಾರೀಚನನ್ನು ಭೇದಿಸಿತು: ಆಗ ಆ ಮಾರೀಚನು, ಮೇಲಕ್ಕೆ ಹಾರಿ, ಭಯಂಕರವಾಗಿ ಅರಚುತ್ತ, ಭೂಮಿಗೆ ಬಿದ್ದನು. ಕಪಟ ಮೃಗರೂಪವನ್ನು ಬಿಟ್ಟು, ನಿಜರೂಪವನು ಹೊಂದಿ, ಸಾಯುವಾಗ ರಾವಣನ ಮಾತುಗಳನ್ನು ನೆನಪಿಗೆ ತಂದುಕೊಂಡು, ರಾಮನ ಧ್ವನಿಯನ್ನೇ ಅನುಸರಿಸುತ್ತಾ "ಹಾ ಸೀತೆ, ಹಾ ಲಕ್ಷ್ಮಣ" ಎಂದು ಕೂಗುತ್ತಾ ಪ್ರಾಣಬಿಟ್ಟನು. ರಾಕ್ಷಸ ರೂಪದ ಮಾರೀಚನನ್ನು ಕಂಡು, ಲಕ್ಷ್ಮಣನ ಊಹೆ ಸರಿಯಾದುದ್ದನ್ನು ಸ್ಮರಿಸಿ, ರಾಮನು, ತನ್ನ ಧ್ವನಿಯಲ್ಲಿ ಮಾರೀಚನು ಕೂಗಿದ್ದನ್ನು ನೆನೆದು, ಸೀತೆ ಅದನ್ನು ಕೇಳಿ ಹೇಗೆ ಇರುವಳೊ, ಮಹಾಬಾಹುವಾದ ಲಕ್ಷ್ಮಣ ಯಾವ ಅವಸ್ಥೆ ಹೊಂದುವನೊ, ಎಂದು ಚಿಂತಿಸಿ, ಮಹಾ ಅನರ್ಥಕ್ಕೆ ಇದು ಕಾರಣವಾಗಬಹುದೆಂದು ಭಯಪಟ್ಟು, ಬೇರೊಂದು ಜಿಂಕೆಯನ್ನು ಹೊಡೆದು

(8ನೇ ಪುಟಕ್ಕೆ)

ನಿಮ್ಮ ಬಗ್ಗೆ ಇಂಥ ಅಸೂಯೆಯನ್ನು ಅವರು ಬೆಳೆಸಿಕೊಳ್ಳಲು ಕಾರಣವಾದರೂ ಏನು ? ನನ್ನ ಅಭಿಪ್ರಾಯದಲ್ಲಿ ಒಂದೇ ಒಂದು ಕಾರಣ. ಹಿಂದೂಗಳಿಗೆ ನಿಮ್ಮ ಬಗ್ಗೆ ಸಹಾನುಭೂತಿ ಇಲ್ಲವಾದ್ದರಿಂದ ಅವರು ತಮ್ಮ ಅಧಿಕಾರವನ್ನು ನ್ಯಾಯವಾಗಿ ಬಳಸುವುದಿಲ್ಲ.ಹೀಗಿರುವಾಗಇಂಥ ದ್ವೇಷಾಸೂಯೆಗಳ ನಡುವೆ ಬದುಕುವ ಪುರುಷಾರ್ಥವಾದರೂ ಏನು ?

ಹಿಂದೂ ಧರ್ಮದಲ್ಲಿ ನಿಮಗೆ ಸಮಾನತೆಯಿದೆಯೇ?

ಹಾಗೆ ನೋಡಿದರೆ ಈ ಪ್ರಶ್ನೆಯನ್ನು ಕೇಳಲೇಬಾರದು. ಇಲ್ಲಿನಂಥ ಅಸಮಾನತೆಯ ಜ್ವಲಂತ ಉದಾಹರಣೆಯನ್ನು ನಾವು ಜಗತ್ತಿನಲ್ಲಿ ಬೇರೆಲ್ಲಿಯೂ ನೋಡಲು ಸಾಧ್ಯವಿಲ್ಲ. ಅಸ್ಪೃಶ್ಯತೆಗಿಂತಲೂ ಕರಾಳವಾದ ಅಸಮತೆಯನ್ನು ಮನುಕುಲ ಚರಿತ್ರೆಯ ಯಾವ ಸಂದರ್ಭದಲ್ಲೂ ನಾವು ನೋಡಲು ಸಾಧ್ಯವಿಲ್ಲ. ಕೇವಲ ಮೇಲರಿಮೆ, ಕೀಳರಿಮೆಗಳ ಭಾವನೆಯಿಂದಾಗಿ ಒಬ್ಬ ಇನ್ನೊಬ್ಬನಿಗೆ ಮಗಳನ್ನು ಕೊಟ್ಟು ಮದವೆ ಮಾಡಲಿಕ್ಕಿಲ್ಲ ಅಥವಾ ಒಬ್ಬ ಇನ್ನೊಬ್ಬನೊಡನೆ ಕಲೆತು ಊಟ ಮಾಡಲಿಕ್ಕಿಲ್ಲ. ಈ ಪರಿಯ ಅಸಮಾನತೆಯ ಉದಾಹರಣೆಗಳು ಅಸಮಾನ್ಯವಾದವೇನಲ್ಲ. ಆದರೆ ಸ್ಪರ್ಶಿಸಲಿಕ್ಕೂ ಮನುಷ್ಯ ಅನರ್ಹ ಎಂಬಷ್ಟರಮಟ್ಟಿಗೆಕೀಳಾಗಿ ಕಂಡ ವ್ಯವಸ್ಥೆಯೊಂದನ್ನು ಹಿಂದೂ ಧರ್ಮದ ಹೊರತು ಬೇರೆಲ್ಲಾದರೂ ನೋಡಲು ಸಾಧ್ಯವೇ ? ಒಬ್ಬ ಸ್ಪರ್ಶಿಸಿದ ಮಾತ್ರಕ್ಕೆ ನೀರನ್ನು ಮೈಲಿಗೆಗೊಳಿಸುವ, ದೇವರನ್ನೆ ಪೂಜೆಗೆ ಅನರ್ಹಗೊಳಿಸುವ ಮನುಷ್ಯ ಪ್ರಾಣಿಯೊಬ್ಬನಿದ್ದಾನೆ ಎಂದು ಯಾರಾದರೂ ನಂಬುತ್ತಾರೆಯೆ ? ಒಬ್ಬ ಅಸ್ಪೃಶ್ಯನಿಗೂ ಒಬ್ಬ ಕುಷ್ಠ ರೋಗಿಗೂ ತೋರುವ ಉಪಚಾರದಲ್ಲಿ ಏನಾದರೂ ವ್ಯತ್ಯಾಸವಿದೆಯೆ ? ಕುಷ್ಠರೋಗಿಯು ಜುಗುಪ್ಸೆ ಬರಿಸುವಂತಿದ್ದರೂ ಜನ ಆತನ ಬಗ್ಗೆ ಕನಿಕರ ತೋರುತ್ತಾರೆ. ಆದರೆ ನಿಮ್ಮ ಬಗ್ಗೆ ಜುಗುಪ್ಸೆಯ ಜೊತೆಗೆ ದ್ವೇಷಾಸೂಯೆಗಳನ್ನೂ ಹೊಂದಿದ್ದಾರೆ. ನಿಮ್ಮ ಸ್ಥಿತಿಯು ಕುಷ್ಠರೋಗಿಗಳಿಗಿಂತಲೂ ನಿಕೃಷ್ಠ. ಇಂದಿಗೂ ಸಹ ಊಟದ ಸಮಯದಲ್ಲಿ ಮಹಾರ್ ವ್ಯಕ್ತಿಯ ಧ್ವನಿ ಕೇಳಿದರೆ ಸಾಕು ಅವರು ಆಹಾರವನ್ನು ಮುಟ್ಟುವುದಿಲ್ಲ. ಆ ಪ್ರಮಾಣದ ಕೊಳಕನ್ನು ನಿಮ್ಮ ದೇಹಕ್ಕೂ ಮಾತುಗಳಿಗೂ ಲೇಪಿಸಿಬಿಟ್ಟಿದ್ದಾರೆ. ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕಂಟಿರುವ ಕಳಂಕ ಎಂಬುದಾಗಿ ಕೆಲವರು ಹೇಳುತ್ತಾರೆ. ಆದರೆ ಆ ಹೇಳಿಕೆಗೆ ಯಾವ ಅರ್ಥವೂ ಇಲ್ಲವಾಗಿದೆ. ಏಕೆಂದರೆ ಹಿಂದೂ ಧರ್ಮವನ್ನು ಅಶುದ್ಧ ಎಂದು ಯಾರೂ ನಂಬುವುದಿಲ್ಲ. ಬಹುಸಂಖ್ಯಾತರಾಗಿರುವ ಹಿಂದೂಗಳು ನಿಮ್ಮನ್ನು ಬೇಕಿದ್ದರೆ ಅಶುದ್ಧರು, ಕಲುಷಿತರು ಎಂದು ಭಾವಿಸುತ್ತಾರೆ. ನಿಮ್ಮನ್ನು ಈ ಹೀನಾಯ ಸ್ಥಿತಿಗೆ ತಂದುದ್ದು ಹೇಗೆ ? ನನಗೆನ್ನಿಸುತ್ತದೆ, ನೀವು ಹಿಂದೂಗಳಾಗಿಯೇ ಮುಂದುವರೆದದ್ದರಿಂದ ನಿಮ್ಮನ್ನು ಈ ಕೂಪಕ್ಕೆ ತಳ್ಳಲಾಗಿದೆ. ಮುಸ್ಲಿಮರಾಗಿ ಮತಾಂತರಗೊಂಡಿರುವ ನಿಮ್ಮೊಳಗಿನ ಕೆಲವರನ್ನು ಈ ಹಿಂದೂಗಳು ಅಸ್ಪೃಶ್ಯರೆಂದೂ ಭಾವಿಸುವುದಿಲ್ಲ, ಅವಮಾನಿತರೆಂತಲೂ ಭಾವಿಸುವುದಿಲ್ಲ. ಕ್ರಿಶ್ಚಿಯನ್ನರಾಗಿರುವವರ ಬಗ್ಗೆಯೂ ಇದೇ ಮಾತನ್ನು ಹೇಳಬಹುದು. ತ್ರಾವಣಕೋರದಲ್ಲಿ ನಡೆದ ಇತ್ತೀಚಿನ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸುವುದು ಉಚಿತ. ಆ ಪ್ರದೇಶದಲ್ಲಿ ಥಿಯಾ ಎಂದು ಕರೆಯಲ್ಪಡುವಅಸ್ಪೃಶ್ಯರನ್ನು ಕೇರಿ ಬೀದಿಗಳಲ್ಲಿ ಓಡಾಡದಂತೆ ನಿಷೇಧ ಹೇರಲಾಗಿತ್ತು. ಕೆಲದಿನಗಳ ಹಿಂದೆ ಅವರಲ್ಲಿಕೆಲವರುಸಿಖ್‌ಧರ್ಮಕ್ಕೆ ಸೇರಿಕೊಂಡರು. ಆಗ ಇದ್ದಕ್ಕಿಂದ್ದಂತೆ ಅವರ ಮೇಲೆ ಹೇರಲಾಗಿದ್ದ ನಿಷೇಧವನ್ನು ಹಿಂತೆಗೆದುಕೊಳ್ಳಲಾಯಿತು. ಇದರಿಂದ ಏನು ವ್ಯಕ್ತವಾಗುತ್ತದೆ ? ನಿಮ್ಮನ್ನು ಅಸ್ಪೃಶ್ಯರು, ಅಸಮಾನರು ಎಂದು ಪರಿಗಣಿಸಲು ಏನಾದರೂ ಒಂದು ಕಾರಣವಿದ್ದರೆ ಅದು ಇನ್ನೇನಲ್ಲ, ನೀವು ಹಿಂದೂಧರ್ಮದೊಂದಿಗೆ ಹೊಂದಿರುವ ಸಂಬಂಧ.

ಇಂಥ ಅಸಮಾನತೆಯ ಹಾಗೂ ಅನ್ಯಾಯದ ನೀಚಸ್ಥಿತಿಯಲ್ಲಿ ಕೆಲವು ಹಿಂದೂಗಳು 'ನಿಮ್ಮನ್ನು ಉದ್ದೇಶಿಸಿ 'ವಿದ್ಯೆ ಕಲಿಯರಿ, ಸ್ವಚ್ಛವಾಗಿ ಇರಿ. ಆಗ ನಿಮ್ಮನ್ನು ಮುಟ್ಟುತ್ತಾರೆ" ಎಂಬುದಾಗಿ ಸಾಂತ್ವನ ಪಡಿಸಲು ಯತ್ನಿಸುತ್ತಾರೆ. ಆದರೆ ವಿದ್ಯಾವಂತರಾಗಿರುವ, ಹಣವಂತರಾಗಿರುವ, ಸ್ವಚ್ಛತೆಯಿಂದ ಕೂಡಿರುವ ಮಹರ್ ವ್ಯಕ್ತಿಯ ಸ್ಥಿತಿಯು ಅವಿದ್ಯಾವಂತನೂ ಬಡವನೂ ಹಾಗೂ ಅಶುಚಿಯಾಗಿರುವ ಮಹರ್ ವ್ಯಕ್ತಿಯ ಸ್ಥಿತಿಯಷ್ಟೇ ನಿಕೃಷ್ಟವಾಗಿದೆ ಎಂಬುದು ನಮಗೆಲ್ಲ ಸ್ವಾನುಭವದಿಂದ ವೇದ್ಯವಾಗಿರುವ ವಿಚಾರ. ಒಂದು ಕ್ಷಣ ಹೀಗೆ ಯೋಚಿಸೋಣ. ಯಾವುದೇ ಒಬ್ಬ ಶ್ರೀಮಾನ್ಯನನ್ನು ಆತ ಅಶಿಕ್ಷಿತ, ಬಡವ, ನೀಟಾದ ಬಟ್ಟೆ ತೊಟ್ಟಿಲ್ಲ ಎಂಬ ಕಾರಣದಿಂದ ಗೌರವದಿಂದ ಕಾಣುವುದಿಲ್ಲ ಎಂಬುದಾದರೆ ಒಬ್ಬ ಸಾಮಾನ್ಯ ಮಹರ್ ತಾನೆ ಏನು ಮಾಡಿಯಾನು ? ಶಿಕ್ಷಣ, ಸಂಪತ್ತು, ವೇಷ- ಭೂಷಣಗಳನ್ನು ಪಡೆಯಲು ಸಾಧ್ಯವಿಲ್ಲದಿರುವಾಗ ಸಮಾನತೆಯನ್ನಾದರೂ ಎಂತು ಪಡೆಯಲು ಸಾಧ್ಯ ! ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳಲ್ಲಿ ಬೋಧಿಸಲಾಗಿರುವ ಸಮಾನತೆಯ ತತ್ವಕ್ಕೂ ಶಿಕ್ಷಣ, ಶ್ರೀಮಂತಿಕೆ ಅಥವಾ ವೇಶ ಭೂಷಣಗಳಿಗೂ ಯಾವ ಸಂಬಂಧವಿಲ್ಲ. ಅವೆಲ್ಲ ಕೇವಲ ವ್ಯಕ್ತಿಯ ಭೌತಿಕ ವಿಷಯಗಳು. ಈ ಎರಡು ಧರ್ಮಗಳೂ ಕೂಡ ಮಾನವೀಯತೆಯನ್ನು ತಮ್ಮ ಮುಖ್ಯ ತತ್ವವನ್ನಾಗಿ ಹೊಂದಿವೆ. ಮಾನವೀಯತೆಯು ಸರ್ವರಿಂದಲೂ ಗೌರವಿಸಲ್ಪಡಬೇಕು. ಯಾರೂ ಕೂಡ ಇತರರನ್ನು ಅಗೌರವಿಸಕೂಡದು, ಯಾರನ್ನೂ ಅಸಮಾನತೆಯಿಂದ ಕಾಣಕೂಡದು ಎಂಬುದಾಗಿ ಈ ಧರ್ಮಗಳು ಉಪದೇಶಿಸಿವೆ. ಇಂಥ ತತ್ವಗಳು ಹಿಂದೂ ಧರ್ಮದಲ್ಲಿ ಸಂಪೂರ್ಣವಾಗಿ ಲೋಪಗೊಂಡಿವೆ. ಮನುಷ್ಯನಲ್ಲಡಗಿರುವ ಮಾನವೀಯ ಗುಣವನ್ನು ಗೌರವಿಸದಿದ್ದ ಮೇಲೆ ಇಂಥದೊಂದು ಧರ್ಮ ಇದ್ದೇನು ಪ್ರಯೋಜನ ? ಮತ್ತು ಅದನ್ನೇ ಅಂಟಿಕೊಂಡು ಇರುವುದರಲ್ಲಿ ಏನು ಪುರುಷಾರ್ಥವಿದೆ ? ಇದಕ್ಕುತ್ತರವಾಗಿ ಕೆಲವು ಹಿಂದೂಗಳು ಉಪನಿಷತ್ತುಗಳನ್ನು ಉದಾಹರಿಸಿ ಅದರ ತತ್ವಗಳ ಪ್ರಕಾರ ದೇವರು ಸರ್ವಾಂತರ್ಯಾಮಿಯಾಗಿದ್ದಾನೆಂದು ಅಭಿಮಾನದಿಂದ ಹೇಳುತ್ತಾರೆ. ಧರ್ಮ ಮತ್ತು ವಿಜ್ಞಾನಗಳು ಬೇರೆ ಬೇರೆ. ಒಂದು ಸಿದ್ಧಾಂತವನ್ನು ಅದು ವಿಜ್ಞಾನದ ಸೂತ್ರವೊ ಅಥವಾ ಧರ್ಮ ತತ್ವವೊ ಎಂಬುದನ್ನು ನಿರ್ಧರಿಸುವುದು ಅತ್ಯವಶ್ಯಕ. ಆ ಪ್ರಕಾರ ದೇವರು ಸರ್ವಾಂತರ್ಯಾಮಿ ಎಂಬುದು ವಿಜ್ಞಾನದ ಸೂತ್ರವೆ ಹೊರತು ಧರ್ಮ ತತ್ವವಲ್ಲ. ಏಕೆಂದರೆ ಧರ್ಮಕ್ಕೆ ಮಾನವನ ನಡುವಳಿಕೆಯೊಂದಿಗೆ ನೇರವಾದ ಸಂಬಂಧವಿದೆ. ದೇವರು ಸರ್ವಾಂತರ್ಯಾಮಿ ಎಂಬತತ್ವವುಧರ್ಮದಭೋಧನೆಯಲ್ಲ. ಅದು ವಿಜ್ಞಾನದ ತತ್ವ. ಹಿಂದೂಗಳು ಈ ತತ್ವಕ್ಕೆ ತಕ್ಕಂತೆ ನಡೆಯುವುದಿಲ್ಲ ಎಂಬ ಸತ್ಯವೇ ಅದು ವಿಜ್ಞಾನದತತ್ವ ಎಂಬುದಕ್ಕೆ ಸಾಕ್ಷಿ. ಇದಕ್ಕೆ ವಿರುದ್ಧವಾಗಿ ಹಿಂದೂಗಳು ದೇವರ ಸರ್ವಾಂತರ್ಯಾಮಿ ತತ್ವವು ವಿಜ್ಞಾನದ್ದಲ್ಲ ಅದು ತಮ್ಮ ಧರ್ಮದ್ದೇ ಎಂದು ವಾದಿಸುವುದಾದರೆ ನಾನು ಹೇಳುವುದಿಷ್ಟೆ, ಹಿಂದೂಗಳಲ್ಲಿರುವಷ್ಟು ಕ್ಷಲ್ಲಕತನ ಜಗತ್ತಿನಲ್ಲೆಲ್ಲಿಯೂ ಇಲ್ಲ. ನಡೆಗೂ ನುಡಿಗೂ ಧ್ರುವಗಳಂತರವುಳ್ಳ ಕ್ರೂರಿಗಳ ಸಾಲಿಗೆ ಈ ಹಿಂದೂಗಳು ಸೇರುತ್ತಾರೆ. ಅವರ ಬಾಯಲ್ಲಿ ರಾಮನಾಮವಿದೆ.ಬಗಲಿಲ್ಲ ಚೂರಿಯಿದೆ. ಅವರು ಸಂತರಂತೆ ಮಾತನಾಡುತ್ತಾರೆ. ಆದರೆ ಕಟುಕರಾಗಿ ವರ್ತಿಸುತ್ತಾರೆ.

ದೇವರು ಸರ್ವರಲ್ಲೂ ಇದ್ದಾನೆ ಎಂದು ನಂಬುತ್ತಾ ಮಾನವರನ್ನು ಪಶುಗಳಿಗಿಂತ

ಕಡೆಯಾಗಿ ಕಾಣುವವರ ಸಹವಾಸವನ್ನು ನೀವು ಮಾಡಬೇಡಿ. ಅವರುಕುಹಕಿಗಳು. ಇರುವೆಗೆ ಸಕ್ಕರೆ ತಿನ್ನಿಸಿ ಮಾನವರಿಗೆ ಕುಡಿಯಲು ನೀರನ್ನೂ ಕೊಡದ ಈ ಮಂದಿಯ ಸಂಪರ್ಕ ಇಟ್ಟುಕೊಳ್ಳ ಬೇಡಿ. ಅವರ ಸಹವಾಸ ನಿಮ್ಮ ಮೇಲೆ ಅದೆಂಥ ಪರಿಣಾಮ ಬೀರಿದೆ ಎಂಬುದರ ಅರಿವು ನಿಮಗಿದೆ ಯೇ ? ನಿಮ್ಮ ಗೌರವವೇ ಕಾಣೆಯಾಗಿದೆ. ನಿಮಗೆ ಸ್ಥಾನಮಾನವಂತೂ ಇಲ್ಲವೇ ಇಲ್ಲ. ಹಿಂದೂಗಳು ನಿಮಗೆ ಗೌರವ ಕೊಡುವುದಿಲ್ಲ ಎಂಬುದು ಅರ್ಧ ಸತ್ಯ. ಹಿಂದೂಗಳೇಕೆ ಮುಸ್ಲಿಮರು, ಕ್ರಿಶ್ಚಿಯನ್ನರು ಸಹ ನಿಮ್ಮನ್ನು ಕೀಳರಲ್ಲಿ ಕೀಳೆಂದು ಭಾವಿಸುತ್ತಾರೆ. ಮುಸ್ಲಿಮ್, ಕ್ರಿಶ್ಚಿಯನ್ ಧರ್ಮಗಳು ಮೇಲು-ಕೀಳೆಂದು ಭೇದಭಾವವನ್ನು ಮಾಡುವುದಿಲ್ಲ ವಾದಾಗ್ಯೂ ಅವುಗಳ ಅನುಯಾಯಿಗಳೇಕೆ ನಿಮ್ಮನ್ನು ಕೀಳೆಂದು ಭಾವಿಸುತ್ತಾರೆ? ಏಕೆ ಎಂದರೆ ಹಿಂದೂಗಳು ನಿಮ್ಮನ್ನು ಕೀಳರಲ್ಲಿ ಕೀಳೆಂದು ಭಾವಿಸುವುದರಿಂದ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರೂ ಸಹ ಕೀಳೆಂದು ಭಾವಿಸುತ್ತಾರೆ. ಅವರಿಗೂ, ಭಯವಿದೆ ಏನೆಂದರೆ ನಿಮ್ಮನ್ನು ಒಂದು ವೇಳೆ ಸರಿಸಮರಾಗಿ ನಡೆಸಿಕೊಂಡರೆ ಹಿಂದೂಗಳು ತಮ್ಮನ್ನೂ ಕೀಳಾಗಿ ಭಾವಿಸುತ್ತಾರೆ ಎಂಬುದಾಗಿ. ಆದ್ದರಿಂದ ನಾವು ಹಿಂದೂಗಳ ದೃಷ್ಟಿಯಲ್ಲಿ ಮಾತ್ರ ಕೀಳಲ್ಲ. ಹಿಂದೂಗಳು ನಮ್ಮನ್ನು ನಡೆಸಿಕೊಂಡ ರೀತಿಯಿಂದಾಗಿ ನಾವು ಸಮಸ್ತ ಭಾರತೀಯರ ಕಣ್ಣಲ್ಲಿ ಅತ್ಯಂತ ಕೀಳು.

ನೀವು ಇಂಥ ಲಜ್ಜಾಹೀನ ಸ್ಥಿತಿಯಿಂದ ಮುಕ್ತರಾಗಬೇಕಾದರೆ, ಈ ಕೊಳಕನ್ನು ನಿವಾರಿಸಿ, ಅಮೂಲ್ಯ ಬದುಕಿನ ಪ್ರಯೋಜನ ಪಡೆಯಲು ಒಂದೇ ಒಂದು ಮಾರ್ಗವಿದೆ. ನಿಮ್ಮನ್ನು ಬಂಧಿಸಿಟ್ಟಿರುವ ಹಿಂದೂ ಧರ್ಮದ ಸಂಕೋಲೆಗಳನ್ನು ಕಿತ್ತೆಸೆಯುವುದು.

ನಿಮಗೇನಾದರೂ ಸ್ವಾತಂತ್ರ್ಯ ಇತ್ತೆ ?

ಕೆಲವರು ನಿಮಗೆ ಕಾನೂನಿನಿಂದ ಮನ್ನಿಸಲ್ಪಟ್ಟ ವಾಣಿಜ್ಯ ಸ್ವಾತಂತ್ರ್ಯ ಇದೆ, ಇತರರಂತೆ ನಿಮಗೂ ವೈಯಕ್ತಿಕ ಸ್ವಾತಂತ್ರ್ಯ ಇದೆ" ಎಂಬುದಾಗಿ ಹೇಳಬಹುದು. ಇಂಥ ಹೇಳಿಕೆಗಳಿಗೇನಾದರೂ ಅರ್ಥವಿದೆಯೆಎಂಬುದನ್ನು ನೀವು ಆಳವಾಗಿ ಯೋಚಿಸಬೇಕು. ಹುಟ್ಟಿನ ಒಂದೇ ಕಾರಣಕ್ಕಾಗಿ ಎಲ್ಲ ವ್ಯವಹಾರಗಳನ್ನು ಕಳೆದು ಕೊಂಡಿರುವ ಮನುಷ್ಯನಿಗೆ "ನಿನಗೆ ವ್ಯವಹಾರ ಸ್ವಾತಂತ್ರ್ಯವಿದೆ ಎಂದು ಹೇಳುವುದರಲ್ಲಿ ಯಾವ ಶ್ರೇಯಸ್ಸಿದೆ ? ಜೀವನೋಪಾಯದ ಹಾಗೂ ಆಸ್ತಿ ಸಂಪಾದನೆಯ ಎಲ್ಲ ಬಾಗಿಲುಗಳೂ ನಿಮ್ಮ ಪಾಲಿಗೆ ಮುಚ್ಚಿರುವಾಗ "ನಿಮಗೆ ಆಸ್ತಿ ಅನುಭೋಗದ ಸ್ವಾತಂತ್ರ್ಯವಿದೆ. ಯಾರೂ ಸಹ ನಿಮ್ಮ ಮುಟ್ಟುಹಣವುದಿಲ್ಲ, ಎಂಬುದಾಗಿ ಕೆಲವರು, ಸಾಂತ್ವನ ಮಾಡುವುದರಲ್ಲಿ ಯಾವ ಪ್ರಯೋಜನವಿದೆ ? ಯಾವ ವ್ಯಕ್ತಿಗೆ ಹುಟ್ಟಿನಿಂದಲೇ ಅಂಟಿಸಲಾಗಿರುವ ಮೈಲಿಗೆಯ ಕಾರಣ ಅವನು ಯಾವುದೇ ನೌಕರಿಗೂ ಅನರ್ಹ ಎಂತಲೂ ಅಂಥವರ ಕೈ ಕೆಳಗೆ ಕೆಲಸ ಮಾಡುವುದು ಇತರರಿಗೆ ಅದು ನಿಂದನೀಯ ಕೃತ್ಯ ಎಂತಲೂ ಭಾವಿಸಲಾಗಿರುವಾಗ "ನಿಮಗೆ ನೌಕರಿಯ ಹಕ್ಕು ಇದೆ" ಎನ್ನುವುದು ಶುದ್ಧ ವ್ಯಂಗ್ಯ. ಕಾನೂನು ಅನೇಕ ಹಕ್ಕುಗಳನ್ನು ಕೊಡಬಹುದು. ಆದರೆ ಸಮಾಜ ನಿಮಗೆ ಅನುಮತಿ ನೀಡಿರುವಷ್ಟನ್ನು ಮಾತ್ರ ನಿಜವಾದ ಹಕ್ಕು ಎಂದು ಕರೆಯಬಹುದು. ದಲಿತರು ಚೆಂದವಾದ ಬಟ್ಟೆಗಳನ್ನು ಧರಿಸಲು ಕಾನೂನು ಸಮ್ಮತಿಸುತ್ತದೆ. ಆದರೆ ಹಿಂದೂಗಳು ಅದಕೆ ಅವಕಾಶ ಕೊಡುವುದಿಲ್ಲವಾದಲ್ಲಿ ಆ ಹಕ್ಕಿನ ಔಚಿತ್ಯವೇನು ? ಕಾನೂನು ಅಸ್ಪೃಶ್ಯರಿಗೆ ಲೋಹದ ಬಿಂದಿಗೆಗಳಲ್ಲಿ ನೀರು ತರಲು ಹಕ್ಕು ನೀಡಿದೆ, ಲೋಹದ ಪಾತ್ರೆಗಳನ್ನು ಉಪಯೋಗಿಸಲು ಹಕ್ಕು ನೀಡಿದೆ, ಮನೆಗಳ ಛಾವಣಿಗೆ ಹೆಂಚು ಹೊದಿಸಲು ಹಕ್ಕು ನೀಡಿದೆ. ಆದರೆ ಹಿಂದೂ ಸಮಾಜ ಹಾಗೆ ಮಾಡಲು ಅವಕಾಶವನ್ನೇ ನೀಡದಿದ್ದರೆ ಅಂಥ ಹಕ್ಕುಗಳು ನಿರುಪಯುಕ್ತ. ಕಾನೂನುಗಳ ಉಲ್ಲಂಘನೆಯ ಇಂಥ ಅನೇಕ ನಿದರ್ಶನಗಳನ್ನು ನೀಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಾಜ ಮನ್ನಿಸಿದ್ದಷ್ಟೇ ಹಕ್ಕು. ಕಾನೂನು ಹಕ್ಕನ್ನು ನೀಡಿದಾಗ್ಯೂ ಸಮಾಜವು ಅದನ್ನು ವಿರೋಧಿಸುವುದಾದರೆ ಹಕ್ಕುಗಳು ನಿಷ್ಪ್ರಯೋಜಕ. ಅಸ್ಪೃಶ್ಯರಿಗೆ ಈ ಹೊತ್ತು ಕಾನೂನುದತ್ತ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾಂತ್ರ್ಯದ ಅಗತ್ಯ ತುಂಬ. ಇದೆ. ಸಾಮಾಜಿಕ ಸ್ವಾತಂತ್ರ್ಯವು ಲಭಿಸುವ ತನಕ ಕಾನೂನು ಮೂಲಕ ಪ್ರಾಪ್ತವಾಗುವ ಈ ಸ್ವಾತಂತ್ರ್ಯವು ದಕ್ಕದಾಗುತ್ತದೆ. ಕೆಲವರು ನಿಮಗೆ ಸ್ವಾತಂತ್ರ್ಯವಿದೆ ಎನ್ನಬಹುದು, ನಿಜ. ನೀವು ಎಲ್ಲಿಗಾದರೂ ಸಂಚರಿಸಬಹುದು, ಕಾನೂನು ಮಿತಿಯಲ್ಲಿ ಏನನ್ನಾದರೂ ಮಾತನಾಡಬಹುದು. ಆದರೆ ಈ ಬಗೆಯ ಸ್ವಾತಂತ್ರ್ಯದ ಉಪಯೋಗವೇನು ? ಮನುಷ್ಯನಿಗೆ ದೇಹವಿರುವಂತೆ ಮನಸ್ಸೂ ಇದೆ. ಕೇವಲ ಭೌತಿಕ ಸ್ವಾತಂತ್ರ್ಯವು ನಿರುಪಯುಕ್ತ. ಮಾನಸಿಕ ಸ್ವಾತಂತ್ರ್ಯವೇ ಅತ್ಯಂತ ಮಹತ್ವಪೂರ್ಣ.

ಸೀತಾಯಣ....

[5ನೇ ಪುಟದಿಂದ]

ಮಾಂಸವನ್ನು ತೆಗೆದುಕೊಂಡು ಉಕ್ಕಡದ ಕಡೆಗೆ ಬಂದನು.

ಸೀತೆಗೆ ಚಿನ್ನದ ಜಿಂಕೆಯ ಬಗೆಗೆ ಎಂಥ ಪ್ರಲೋಭನೆಯಾಗಿದೆಯೆಂದರೆ, ಜೀವಂತವಾಗಿ ಅದು ಸಿಕ್ಕದೆ ಹೋದರೆ ಹೊಡೆದು ತಂದ ಅದರ ಚಿನ್ನದ ತೊಗಲಿನ ಮೇಲೆ ಕುಳಿತುಕೊಳ್ಳಲು ಇಚ್ಛಿಸುತ್ತಾಳೆ. ಇಂಥ ಅದಮ್ಯ ಅಭಿಲಾಷೆ (ಕಾವ್ಯ ಸ್ವೇಚ್ಛಾಪ್ರವೃತ್ತಿ) ಹೆಂಗಸರಿಗೆ ಯೋಗ್ಯವಲ್ಲ ಎಂಬ ಪರಿವೆ ಆಕೆಗಿದೆ ; ಆದರೆ ಅವಳು ಅದನ್ನು ಮೀರಲಾರದವಳಾಗಿದ್ದಾಳೆ. ಅವಳಿಂದ ಪ್ರಚೋದಿತನಾದ ರಾಮನೂ ಕೂಡ ಆ ಮೃಗದಿಂದ ಪ್ರಲೋಭಗೊಳ್ಳುತ್ತಾನೆ. ಅದರ ಸೌಂದರ್ಯವನ್ನು ಸೀತೆಯಂತೆಯೆ ವಿಸ್ಮಯದಿಂದ ಭ್ರಮೆಗೊಂಡು ವರ್ಣಿಸುತ್ತಾನೆ. ಅದರ ಕಾಂಚನ ತ್ವಚೆಯ ಮೇಲೆ ಸುಮಧ್ಯಮೆಯಾದ ವೈದೇಹಿಯು ತನ್ನೊಡನೆ (ಮಯಾ ಸಹ) ಕುಳಿತು ಕೊಳ್ಳುತ್ತಾಳೆಂದು ಆಶಿಸುತ್ತಾನೆ. ಅದನ್ನು ಜೀವಂತ ಹಿಡಿದು ಇಲ್ಲವೆ ಕೊಂದು ಅದರ ಚರ್ಮದೊಂದಿಗೆ ಬರುವುದಾಗಿ ನಿರ್ಧರಿಸಿ ಹೊರಡುತ್ತಾನೆ. ಆದರೆ, ಅದನ್ನು ಹಿಡಿದು ತರುವುದಿರಲಿ, ಕೊಂದು ಅದರ ಚರ್ಮವನ್ನೂ ತರಲಾರದವನಾಗುತ್ತಾನೆ. ಅದನ್ನು ಕೊಂದಾಗ ಭ್ರಮೆಯೊಡೆದು, ಚಿನ್ನದ ಜಿಂಕೆಯ ಕನಸು ಮಾಯವಾಗಿ, ಲಕ್ಷ್ಮಣ ಹೇಳಿದ ನಿಜಗೋಚರವಾದಾಗ, ರಾಮನೂ ಅದು ಅನರ್ಥಕ್ಕೆ ಕಾರವಾಗಬಹುದೆಂದು ಭಯಗೊಳ್ಳುತ್ತಾನೆ.

ಲಕ್ಷ್ಮಣನ ಎಚ್ಚರಿಕೆಯನ್ನು ಅಲಕ್ಷಿಸಿದ ಸೀತಾರಾಮರು ಮುಂದೆ ದಾರುಣ ದುಃಖಕ್ಕೆ ಒಳಗಾಗುತ್ತಾರೆ. ಹಾಗೆಯೆ ಮೊದಲು ಅಕಂಪನನಿಂದ ಅನಂತರ ಶೂರ್ಪನಖಿಯಿಂದ ಪ್ರಚೋದಿತನಾಗಿ, ಸೀತೆಯನ್ನಪಹರಿಸಲು ತನ್ನ ಸಹಾಯ ಕೇಳಿ ಬಂದ ರಾವಣನಿಗೆ ಮಾರೀಚನು ಎಚ್ಚರಿಕೆ ಹೇಳುತ್ತಾನೆ. ಆದರೆ, ಆ ಎಚ್ಚರಿಕೆಯನ್ನು ಲಕ್ಷಿಸದೆ, ಸೀತೆಯನ್ನು ಅಪಹರಿಸಿ, ಮುಂದೆ ತಾನೇ ಸಾವಿಗೆ ಬಳಗಾಗುವುದಲ್ಲದೆ,. ಈಗ ಮಾರೀಚನ ಸಾವಿಗೂ ಕಾರಣವಾಗುತ್ತಾನೆ. ಈ ಸಾಮ್ಯ ಗಮನಿಸಬೇಕಾದದ್ದು.

ಇಲ್ಲೆಲ್ಲಾ ರಾಮನನ್ನು ಕುರಿತು "ಹೇ ಮಹಾಬಾಹೊ" "ಹೇ ನರಶಾರ್ದೂಲ" ಎಂದು ಸೀತೆ ಸಂಬೋಧಿತ್ತಾಳೆ ; ಜಿಂಕೆಯನ್ನು ನೋಡಲು ಬರುವ ರಾಮಲಕ್ಷ್ಮಣರಿಬ್ಬರನ್ನೂ ಕವಿ "ನರವ್ಯಾಘ್ರರು" ಎನ್ನುತ್ತಾನೆ. "ಮಾರೀಚ-ಜಿಂಕೆ" ಯನ್ನು ಕೊಲ್ಲಲು ಸಿದ್ದನಾದ ರಾಮನನ್ನು ಕವಿ "ಮಹಾತೇಜಃ" ಎನ್ನುತ್ತಾನೆ: ರಾಮಬಿಟ್ಟ-ಬಾಣನನ್ನು "ಶ್ವಸಂತಂ ಪನ್ನಗಮೀವ್" ಎನ್ನುತ್ತಾನೆ. ಈ ಅಂಶಗಳ ವೈಶಿಷ್ಟಗಳ ಚರ್ಚೆ ಅನಂತರದ ಲೇಖನಗಳಲ್ಲಿ.

ನಮ್ಮ ಸಮಾಜಕ್ಕೆ ತಗುಲಿರುವ

ಪುರೋಹಿತ ಶಾಹಿ ಕ್ಯಾನ್ಸರ್

ಮುಳ್ಳೂರು ನಾಗರಾಜ್

ಹಿತರೆ,

ನಮ್ಮೆದುರು ಚರಿತ್ರೆ ಇದೆ. ಅನೇಕ ಸಲ ಅದು ಳ್ಳಾಗಿದೆ,ಯಾಕೆಂದರೆ ಅದು ಮನುಷ್ಯ ಲೋಕದ ನೋವುಗಳೊಡನೆ ಮಾತನಾಡಿಲ್ಲ. ದುಡಿಯುವ ಕೂಲಿಕಾರನ, ಅಸ್ಪೃಶ್ಯನ ನೋವುಗಳ ಅಭಿವ್ಯಕ್ತಿ ದಾಗಿಲ್ಲ. ಚರಿತ್ರೆ ನಿಷ್ಕ್ರಿಯವಾದಾಗ ಅದಕ್ಕೆ ಜೀವ ತುಂಬಲು ಹೋರಾಟದ ಸಂವೇದನೆಗಳಿಗೆ ಮಾತ್ರ ಸಾಧ್ಯ.

ಈಗ ನೋಡಿ, ಪುರೋಹಿತಶಾಹಿ ಇದೆಯಲ್ಲ, ದೊಂದು ಕರಾಳ ರೋಗ. ಒಬ್ಬನನ್ನ ಮೇಲು ಅಂತಲೂ ಮತ್ತೊಬ್ಬನನ್ನ ಕೀಳು ಅಂತಲೂ, ನಮ್ಮೆ ರನ್ನು ಅದು ಕೊಲ್ಲುತ್ತಿದೆ. ಈ ಅಖಂಡ ಇಂಡಿ ಯಾಕ್ಕೆ ಅದಾವ ರೋಗ ಬಡಿದಿದೆ? ಮನಕುಲದ ತ್ರ ಅದೇಕೆ ಕಿಲುಬುಗಟ್ಟಿದೆ? ಇಂಥ ಅನೇಕ ಪ್ರಶ್ನೆಗಳು ನಮ್ಮ ಜೀವ ಸುಟ್ಟಿವೆ.ಇವಕ್ಕೆ ಉತ್ತರ ಕೊಡಲು ಎಂಥ ದೊಡ್ಡವರಿಗೂ ಆಗಿಲ್ಲ.

ಅಸ್ಪೃಶ್ಯತೆ ಮನುಷ್ಯ ಕುಲದ ಗಾಢ ಕಳಂಕ. ಪುರೋಹಿತಶಾಹಿ ಎಂಬ ಕ್ಯಾನ್ಸರ್ ನಮ್ಮ ಸಮಾಜದ ಹೃದಯವ ಆಕ್ರಮಿಸಿದೆ. ಮಾನವ ಕುಲದ ಆದಿಯಲ್ಲಿ ಜಾತಿಗಳೂ, ಪುರೋಹಿತರೂ ಇರಲಿಲ್ಲ. ಜಾಣನು ದಡ್ಡನ ದುಡಿಮೆ ಯನ್ನ ಅವಲಂಬಿಸಿದಾಗಿನಿಂದ ಕೊಲೆಯೂ ಸುಲಿ ಗೆಯೂ ಕ್ರೌರ್ಯವೂ ಮಾನವಲೋಕವನ್ನು ಆಕ್ರಮಿ ಸಿವೆ.

ಹಾಗೆ ನೋಡಿದರೆ ಭೂಮಿ ಯಾರ ಅಪ್ಪನದೂ ಲ್ಲ. ಅದರ ಮೇಲೆ ಅಧಿಕಾರ ಸಾಧಿಸುವ ಮಾನವ ಮತ್ತ ಮಹಾಯುದ್ಧಗಳನ್ನು ಕಂಡಿದೆ. ಕೋಟಿ ಗಳನ್ನ ಕಟ್ಟಿದೆ. ಮುತ್ತುಕಿಡವಿದೆ. ದುಃಖ ದಾರಿದ್ರ್ಯ ಗಳನ್ನ, ನೋವು ಮತ್ತು ಅಸ್ಪೃಶ್ಯತೆಯನ್ನ ಈ ಜಗತ್ತಿನ ತುಂಬ ಬಿತ್ತಿದ್ದಾರೆ ಪುರೋಹಿತರು.

ಈ ಪುರೋಹಿತರು ಯಾರು ಅಂದರೆ ತಾವು ಶ್ರೇಷ್ಠರೆಂಬ ಕುಲದ ಹಿರಿಮೆಯನ್ನೂ, ಹುಸಿ ಅಹ ಮಿಕೆಯನ್ನೂ ಸಾಧಿಸಬಯಸುವ ಸರ್ವಕಾಲೀನ ಖೊಮಿನಿಯರು. ಯಾವತ್ತೂ ದುಡಿಯದೆ ಬಹುಜನರ ದುಡಿಮೆಯ ಫಲವುಣ್ಣುವ ಪರಾವ ಲಂಬಿ ನರಹಂತಕರು. ಧರ್ಮದ ಹೆಸರಿನಲ್ಲಿ ಇವರು ಚೆಲ್ಲಿದ ರಕ್ತ, ನಡೆಸಿದ ನಿರಂತರ ಹತ್ಯಾಕಾಂಡ— ಅಯ್ಯೋ ಅದನ್ನು ಹೇಳಲು ನಮಗೆ ಸಾವಿರ ನಾಲಗೆಗಳು ಸಾಲದಾಗಿವೆ.

ನಮ್ಮ ನಾಡಿನ ಮಹಾ ಕಾವ್ಯಗಳು ಕೂಡಾ ಪುರೋಹಿತಶಾಹಿ ವಿಷವೃಕ್ಷಗಳು ಎಂದು ನಿಮಗೆ ಹೇಳಲು ಬಯಸುವೆ. ಹೇಗೆಂದರೆ, ಇವು ಯುದ್ಧ ಗಳು ಶ್ರೇಷ್ಠವೆಂದು ಸಾರುತ್ತವೆ. ಮಹಾಭಾರತ ವನ್ನೇ ಉದಾಹರಣೆಗೆ ತೆಗೆದುಕೊಳ್ಳಿ. ಅಣ್ಣ ತಮ್ಮರು ನೆಲಕ್ಕಾಗಿ ಕಾದಾಡಿ ಮಡಿದರು. ನೆಲದ ಮೇಲಿನ ಅಧಿಕಾರ ಪಡೆಯಲು ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು ಕೊಂದರು.ಇದು ಯಾವ ಘನತೆ ?ಕೊಲೆಯೇ ಕ್ಷಾತ್ರ ಕರ್ತವ್ಯವೆಂದು ಸಾರುವ ಮಹಾಭಾರತದಲ್ಲಿ ಮಾನವತೆ ಎಲ್ಲಿದೆ ಹೇಳು ತ್ತೀರಾ ?

ಈ ರಣರಂಗದಲ್ಲೇ ನೋಡಿ ಹಿಂದೂ ಧರ್ಮಿ ಯರು ಪವಿತ್ರವೆಂದು ಸಾರುತ್ತಿರುವ ಭಗವದ್ಗೀತೆ ಹುಟ್ಟಿದ್ದು. ನಮ್ಮ ನಾಡಿನ ಅಸ್ಪೃಶ್ಯರನ್ನು, ಹೆಂಗ ಸರನ್ನು ಚರಿತ್ರೆಯ ಕತ್ತಲಲ್ಲಿ ಇರಿಸಿದ 'ಭಗ ಗೀತೆ' ಯಾದ ಭಗವದ್ಗೀತೆ ಕ್ರೌರ್ಯವನ್ನು ಬೋಧಿಸಿದೆ. ವರ್ಣಧರ್ಮಗಳ ತುತ್ತೂರಿಯಾಗಿರುವ ಗೀತೆಯು ಮನುಕುಲದ ಕೊಲೆಗೆ ಕಾರಣವಾಗಿದೆ. ಹಿಂದೂ ಸಮಾಜದ ವಿಕೃತ ಮನಸ್ಸುಗಳ ಘೋರಪಾಪಗಳ ಸಂಗ್ರಹ ಸದರಿ'ಗೀತೆ'.

....ನಾನು ಹೇಳುತ್ತಿರುವುದು ಇಷ್ಟೆ. ಭಗವ ದ್ಗೀತೆ ಜೀವ ವಿರೋಧಿ. ಗೀತೆಯಷ್ಟೇ ಮಾನವ ವಿರೋಧಿಯಾದ ಮತ್ತೊಂದು ಮಹಾಗ್ರಂಥ— 'ಮನುಸ್ಮೃತಿ :

1. ಅದರ ಪ್ರಕಾರ ಅಸ್ಪೃಶ್ಯರು ಊರ ಹೊರಗಿನ ಸ್ಮಶಾನವಾಸಿಗಳಾಗಿರಬೇಕು.
2. ಮಣ್ಣಿನ ಪಾತ್ರೆಗಳಲ್ಲಿ ಉಣ್ಣಬೇಕು.
3. ಮೇಲ್ಜಾತಿಯವರು ತಿಂದೆಸೆದ ಎಂಜಲನ್ನು ಮತ್ತೆ ತಿನ್ನಬೇಕು.
4. ಕತ್ತೆ ಮತ್ತು ನಾಯಿಗಳನ್ನ ಅವರು ಸಾಕಬಹುದು.
5. ಅವರು ತಮ್ಮ ಹಕ್ಕಿನ ಭೂಮಿ ಪಡೆ

ಗಳಿಷ...
ಕಲಿಯ...
ಯಾವ ಪ್ರ...
ಗಳನ್ನು ಕೇಳ...
ಕೊಂಡ ಆ...
ಕನಿಷ್ಠ ಶಿಕ್ಷೆ.

ಯಾವುದಾದರೂ... ನಾಲಗೆ ಮೂಲಕ ಹೇಳ... ಕತ್ತರಿಸಬೇಕೆನ್ನುವನು ಮನು. ... ಸಂಸ್ಕೃತವು ಅಸ್ಪೃಶ್ಯನ ಮಿದುಳಲ್ಲಿ ನೆಲೆಯಾಗಿದ್ದ ಆ ತಲೆಯ ಕತ್ತರಿಸಬೇಕೆಂದು ಹೇಳುತ್ತದೆ "ಮನುಕಾನೂನು".

ಶಂಭೂಕ-ವೇನರ ತಲೆ ಕತ್ತರಿಸಿದ್ದು ಪುರೋಹಿತ ಶಾಹಿ ಬ್ರಹ್ಮನ ತಲೆಯಿಂದ ಬಂದವೆಂದು ಹೇಳು ವ ಬ್ರಾಹ್ಮಣರಿಗೆ ಕನ್ನಡದಲ್ಲಿ "ಭೂಸುರ" ಎಂಬ ಮತ್ತೊಂದು ಹೆಸರಿದೆ. ಭೂಸುರ ಅಂದರೆ ಭೂಮಿಯ ಮೇಲೆ ನಡೆದಾಡುವ ದೇವರುಗಳು ಎಂದರ್ಥ. ತಮಗಿಂತಲೂ ಬಲವಂತರಾದ ಕ್ಷತ್ರಿ ಯರನ್ನು ಮನುವಿನ ವಿಧಿ ನಿಷೇಧಗಳ ಮೂಲಕ ಅವರು ಕಟ್ಟಿ ಹಾಕಿದ್ದರು. ತಾವು ಕೊಲ್ಲದೆ ಅವರ ಮೂಲಕ ಕೊಲ್ಲಿಸಿದರು.

ಪುರೋಹಿತರು ಮಾನವ ಕುಲದ ವಿಜ್ಞಾನದ ಕಣ್ಣನ್ನು ಕಿತ್ತರು. ಸತ್ಯವನ್ನ ಕೊಂದರು. ಮಾನ ವತೆಯ ಕೈಕಾಲು ಕತ್ತರಿಸಿದರು. ವ್ಯವಸ್ಥೆಯ ವಿರುದ್ಧದ ಯಾವುದೇ ಪ್ರತಿಭಟನೆಯನ್ನು ತಣ್ಣ ಗಾಗಿಸಿದರು.

ಇತ್ತೀಚೆಗೆ ಒಂದು ಸುದ್ದಿ. ಪೇಪರಿನಲ್ಲಿ ನೀವು ಕೂಡ ಓದಿರಬಹುದು ; ತಿರುಪತಿಯ ವೆಂಕಟೇಶ್ವ ರನ ಹುಂಡಿಗೆ ಭಕ್ತನೊಬ್ಬ ಚಿನ್ನದ ಜನಿವಾರ ವನ್ನೂ, ಮಂಗಲ ಸೂತ್ರಗಳನ್ನೂ ಹಾಕಿದ್ದ ಆತ ಹತ್ತಾರು ಹಿಮಾಲಯಗಳಷ್ಟು ಪಾಪ ಮಾಡಿರ ಬಹುದು ; ಅರಬ್ಬಿ ಸಮುದ್ರದಷ್ಟು ಕ್ರಿಮಿನಲ್ ಇರಬಹುದು. ಅದಕ್ಕೇ ದೊಡ್ಡ ಮೊತ್ತದ ಲಂಚ ಕೊಟ್ಟಿದ್ದಾನೆ.

ಲಂಚಕೋರ ದೇವರುಗಳನ್ನೂ, ಜಾತಿವಾದಿ ಹಿಟ್ಲರ್‌ಗಳನ್ನೂ ಪಡೆದ ಈ ನಾಡಿನ ಭ್ರಷ್ಟತೆಗೆ ಸಮನಾದದ್ದು ಯಾವುದೂ ಇಲ್ಲ. ಈ ದುರಂತ ದಲ್ಲೂ ದಲಿತ ಸಂಘರ್ಷ ಸಮಿತಿ ಒಂದು ಆಶಾ ಕಿರಣವಾಗಿದೆ.

(ಪಾಂಡವಪುರದ ದ. ಸಂ. ಸ. ಕಾರ್ಯಕರ್ತರ ತರ ಬೇತಿ ಶಿಬಿರದಲ್ಲಿ ಮಾತನಾಡಿದ್ದು)

...ನಾಡು, ನುಡಿಯ ಇತಿಹಾಸ ಭವ್ಯ

...ರ ಪುನರುತ್ಥಾನಕ್ಕೆ ನಮ್ಮ ಯೋಜನೆಗಳು

ಕರ್ನಾಟಕ ತನ್ನದೆ ಆದ ಭವ್ಯ ಪರಂಪರೆಯನ್ನು ಹೊಂದಿದೆ. ಈ ಪರಂಪರೆಯನ್ನು ಉಳಿಸಿ, ಬೆಳೆಸಿ, ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎರಡು ಪ್ರಮುಖ ಯೋಜನೆಗಳನ್ನು ಹಮ್ಮಿಕೊಂಡಿದೆ.

1) ಕನ್ನಡ ಅಭಿವೃದ್ಧಿ :

* ಈ ಯೋಜನೆಯಡಿ ತರಬೇತಿ ಶಿಬಿರಗಳು, ಭಾಷಾಂತರ ಮತ್ತು ಪ್ರಕಟಣೆಗಳು ಹಾಗೂ ಇತರ ಪ್ರೋತ್ಸಾಹಕ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಮೂಲಕ ರಾಜ್ಯದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದ ಎಲ್ಲ ಅಧಿಕಾರಿಗಳು ಮತ್ತು ನೌಕರರಿಗೆ ಆಡಳಿತ ಕನ್ನಡದಲ್ಲಿ ತರಬೇತಿ, ಎಲ್ಲ ಇಲಾಖೆಗಳ ಪಾರಿಭಾಷಿಕ ಶಬ್ದಕೋಶಗಳ ರಚನೆ, ಪರಿಷ್ಕರಣ ಹಾಗೂ ಅನುವಾದ, ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರಿಗೆ ಪ್ರೋತ್ಸಾಹ, ಧನಸಹಾಯ ಮತ್ತು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಕೆಲಹಂತಗಳಲ್ಲಿ ವಿದ್ಯಾರ್ಥಿವೇತನ ನೀಡಿಕೆ ಮುಂತಾದ ಕಾರ್ಯಕ್ರಮಗಳು.

2) ಸಾಹಿತ್ಯ ಮತ್ತು ಸಂಸ್ಕೃತಿ ಚಟುವಟಿಕೆಗಳು :

* ರಾಜ್ಯದಲ್ಲಿ ಸಾಹಿತ್ಯ, ನಾಟಕ, ಲಲಿತಕಲೆ, ಸಂಗೀತ, ನೃತ್ಯ, ಜಾನಪದ, ಯಕ್ಷಗಾನ ಮತ್ತು ಉರ್ದು ಅಕಾಡೆಮಿಗಳು ಸ್ಥಾಪಿತಗೊಂಡಿವೆ. ಇವುಗಳ ಮೂಲಕ ಸಾಹಿತಿಗಳು, ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ; ರಾಜ್ಯದ ಹೊರಗಡೆಯೂ ತಮ್ಮ ಪ್ರತಿಭೆ ತೋರಲು ಎಲ್ಲ ಅವಕಾಶ ಮತ್ತು ಪ್ರೋತ್ಸಾಹ ; ಪುಸ್ತಗಳ ಪ್ರಕಟಣೆ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರಸಂಕಿರಣಗಳು, ಲೇಖಕರಿಗೆ ಮತ್ತು ಕಲಾವಿದರಿಗೆ ವಿಶೇಷ ಜ್ಞಾನಾರ್ಜನೆಗಾಗಿ ಪ್ರವಾಸಾನುದಾನ, ವೈದ್ಯಕೀಯ ನೆರವು, ಹೊರನಾಡಿನ ಕನ್ನಡ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಸಹಾಯಧನ,ರಂಗ ತರಬೇತಿ ಕಾರ್ಯಕ್ರಮ, ತರಬೇತಿ ಶಿಬಿರಗಳು, ಗ್ರಂಥ ಭಂಡಾರಗಳಿಗೆ ಸಹಾಯಧನ ನೀಡಿಕೆ, ಮುಂತಾದ ಕಾರ್ಯಕ್ರಮಗಳು. ಇಷ್ಟೇ ಸಾಲದೆಂಬಂತೆ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಸ್ಥಾನವಾಗಿ ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರಂಗಮಂದಿರಗಳು ;

ಈ ಎಲ್ಲ ಕಾರ್ಯಕ್ರಮಗಳಿಗಾಗಿ ಕನ್ನಡ ಭಾಷೆ ಮತ್ತು ನಾಡಿನ ಭವ್ಯಪರಂಪರೆಯ ಪುನರ್ನಿರ್ಮಾಣವಾಗುತ್ತಲಿದೆ.

"ಕರ್ನಾಟಕ ವಾರ್ತೆ"

ಹೌದು ರಾಯಣ್ಣನಿಗೆ ಚಿಂತೆ ದೂರವಾಗಿದೆ.

ಈಗ ಅವನ ಮಡದಿಮಕ್ಕಳ ಒಡಲು ತುಂಬುತ್ತದೆ.

984ರ ಜನವರಿಯಿಂದ 1,21,585 ಮಂದಿ ಕೂಲಿಗಾರರಿಗೆ ಉದ್ಯೋಗ. ಇದು ಸಾಧ್ಯವಾಗಿರುವುದು ಕರ್ನಾಟಕದ ಕ್ರಾಂತಿಕಾರಿ ಉದ್ಯೋಗ ಭರವಸೆ ಯೋಜನೆಯಿಂದ

ಮೊದಲು ಇದೇ ರಾಯಣ್ಣನ ದುರವಸ್ಥೆ ಹೇಳತೀರದು. ಬೆಳಗಾದರೆ ಸಾಕು ಹೊಟ್ಟೆಗೇನು ಗತಿ ಎಂಬ ಚಿಂತೆ ಅವನದು. ಸಣ್ಣ ಪುಟ್ಟ ಯಾವ ಕೆಲಸ ಮಾಡಿದರೂ ಅರೆಹೊಟ್ಟೆಯೇ. ಮನೆಯಲ್ಲಿ ಹಸಿವಿನಿಂದ ಕಂಗಾಲಾದ ಹೆಂಡತಿ. ಇಬ್ಬರೂ ಮಕ್ಕಳು.

ಹಾಗೇ ನೋಡಿದರೆ ಇದು ರಾಯಣ್ಣನೊಬ್ಬನ ಸ್ಥಿತಿಯಲ್ಲ. ಇದು ಅವನಂತೆಯೇ ತೀರ ಬಡತನದಲ್ಲಿ ನರಳುತ್ತಿರುವ ಲಕ್ಷಾಂತರ ದುರ್ಬಲರ ಸ್ಥಿತಿ. ಕರ್ನಾಟಕ ಸರ್ಕಾರ ತನ್ನ ಕ್ರಾಂತಿಕಾರೀ ಉದ್ಯೋಗ ಭರವಸೆ ಯೋಜನೆಯನ್ನು ಜಾರಿಗೆ ತಂದ ಮೇಲೆ ಇಂಥವರ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ಇದು ಅಂತಿಂಥ ಯೋಜನೆಯಲ್ಲ: ಗ್ರಾಮಾಂತರ ಪ್ರದೇಶಗಳಲ್ಲಿ 18 ರಿಂದ 60 ವರ್ಷದೊಳಗಿನ ಸದೃಢವ್ಯಕ್ತಿ ಯಾರೇ ಆದರೂ ವರ್ಷದ ಯಾವುದೇ ಕಾಲದಲ್ಲಿ ಎಷ್ಟು ಅವಧಿಯವರೆಗೆ ಬೇಕಾದರೂ ಉದ್ಯೋಗ ಪಡೆಯಬಲ್ಲ ಯೋಜನೆ.

ಈ ಯೋಜನೆ ಈಗ ನನಸಾಗುತ್ತಿದೆ. 1984ರ ಜನವರಿಯಿಂದ ಕರ್ನಾಟಕದಾದ್ಯಂತ 89 ತಾಲ್ಲೂಕುಗಳಲ್ಲಿ 2.78 ಲಕ್ಷ ಗ್ರಾಮೀಣ ಕೂಲಿಕಾರರು ಉದ್ಯೋಗ ಪಡೆದಿದ್ದಾರೆಂದರೆ....ಪ್ರಾಮಾಣಿಕ ಪ್ರಯತ್ನದ ಫಲ ಇದು.ನಾವು ಹೆಮ್ಮೆ ಪಡುವಂತ ಸಾಧನೆ ಇದು. ನಮ್ಮ ಯೋಜನೆಗೆ ಸಾಧನೆಗೆ ಒಂದೇ ಗುರಿ–ದುರ್ಬಲ ವರ್ಗದವರ ಏಳಿಗೆ

ಕರ್ನಾಟಕ ವಾರ್ತೆ

ವಂಚನೆಗೆ ತುತ್ತಾಗಿರುವ ಗಿರಿಜನರು

ಈ ಸಮಾಜ ವ್ಯವಸ್ಥೆಯಲ್ಲಿ ಹರಿಜನ–ಗಿರಿಜನರು ಅತ್ಯಂತ ಹೀನ ಸ್ಥಿತಿಗೆ ತುಳಿಯಲ್ಪಟ್ಟ ಜನಾಂಗವಾಗಿದ್ದಾರೆ. ಸರ್ಕಾರ ತನ್ನ ಭೂಸುಧಾರಣಾ ಘೋಷಣೆಗಳಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಹೇಳಿಕೊಂಡಿದ್ದರೂ ಕ್ರಿಯಾರೂಪಕ್ಕೆ ಬಂದಾಗ ನಿಜವಾಗಿ ಉಳುಮೆ ಮಾಡುವ ಹರಿಜನ ಗಿರಿಜನರು ಈ ಕಾನೂನಿನ ಅನುಕೂಲತೆಯನ್ನು ಪಡೆಯಲಾರದೆ ವಂಚಿತರಾಗಿದ್ದಾರೆ. ಕಾನೂನನ್ನು ಜಾರಿಗೊಳಿಸುವ ಹಂತದಲ್ಲಿ ಅನೇಕ ರೀತಿಯ ಮೋಸಗಳು ನಡೆದಿವೆ. ಕೆಲವು ಪ್ರಕರಣಗಳಲ್ಲಿ ಹರಿಜನ ಗಿರಿಜನರು ಭೂಮಿಯನ್ನು ಪಡೆದುಕೊಂಡರೂ ಅದನ್ನು ಉಳಿಸಿಕೊಳ್ಳಲಾರದ ವ್ಯವಸ್ಥೆಯಿಂದ ಮತ್ತೆ ಭೂರಹಿತರಾಗಿದ್ದಾರೆ.

ಅತ್ಯಂತ ಹೆಚ್ಚಿನ ಸಂಖ್ಯೆಯ ಹರಿ/ಗಿರಿಜನರು ತಮ್ಮ ಬದುಕಿಗಾಗಿ ಹೊಲಗದ್ದೆಗಳಲ್ಲಿ ದುಡಿಮೆ ಮಾಡುವ ಉಳುಮೆದಾರರಾಗಿದ್ದರೂ ಇವರೇಕನಿಷ್ಠ ಭೂಮಿ ಹೊಂದಿ ಭೂ ರಹಿತರೂ ಆಗಿದ್ದಾರೆ. ಬೇರೆ ಎಲ್ಲ ಜನಾಂಗಕ್ಕಿಂತಲೂ ಅತ್ಯಂತ ಕಡಿಮೆ ಭೂಮಿ ಹೊಂದಿದವರೂ ಇವರೇ ಆಗಿದ್ದಾರೆ. ಅಲ್ಲದೆ ಇವರು ಅತಿ ಸಣ್ಣ ಹಿಡುವಳಿಗಳಲ್ಲಿ ಕೆಲಸ ಮಾಡುವುದೆಂದರೆ ದಿವಾಳಿಯಾಗುವುದರತ್ತ ಹೆಜ್ಜೆ ಇಟ್ಟಂತಾಗುತ್ತದೆ.

"1961ರ ಸೆನ್ಸಸ್ ಪ್ರಕಾರ ಭಾರತದಲ್ಲಿ 3.15ಕೋಟಿ ಕೃಷಿಕಾರ್ಮಿಕರಿದ್ದು ಅವರಲ್ಲಿ 1.04ಕೋಟಿ ಅಥವ ಶೇಕಡ 33ಮಂದಿ ಹರಿಜನ ಗಿರಿಜನ ಕೋಮಿಗೆ ಸೇರಿದವರಾಗಿದ್ದಾರೆ. ಅದೇ ಆಧಾರದ ಪ್ರಕಾರ ಶೇಕಡ 75 ಮಂದಿ ಹರಿಜನರು ಮತ್ತು ಶೇಕಡಾ 54.71 ಗಿರಿಜನರು 5 ಎಕರೆಗಳಿಗಿಂತಲೂ ಕಡಿಮೆ ಭೂಮಿಯನ್ನು ಹೊಂದಿದವರಾಗಿದ್ದಾರೆ. ಕರ್ಣಾಟಕದಲ್ಲಿ ಶೇಕಡ 15 ಮಂದಿ ಗಿರಿಜನರು ಒಂದು ಎಕರೆಗಿಂತಲೂ ಕಡಿಮೆ ಭೂಮಿಯ ಮಾಲಿಕರಾಗಿದ್ದಾರೆ. ಮತ್ತೆ ಈ ಭೂಮಿಯ ಉತ್ಪಾದನಾಸಾಮರ್ಥ್ಯ ಹಾಗೂ ಗುಣಮಟ್ಟ ಅತಿ ಕೀಳಾಗಿರುತ್ತದೆ.ನೀರಾವರಿಸೌಲಭ್ಯವಿಲ್ಲದ, ದಿಬ್ಬದ ಭೂಮಿಯಾಗಿರುವ ಮತ್ತು ಸಣ್ಣ ಹಿಡುವಳಿಗಳಾಗಿರುವಂಥ ಅನೇಕ ಅಂಶಗಳು ಉತ್ಪಾದನಾ ಸಾಮರ್ಥ್ಯವನ್ನು ಕುಗ್ಗಿಸುತ್ತವೆ[1].

ಭೂಮಿಗೆ ಸಂಬಂಧಪಟ್ಟ ಸಮಸ್ಯೆಗಳಲ್ಲಿ ಹರಿಜನರಿಗಿಂತ ಗಿರಿಜನರೇ ಅತ್ಯಂತ ಮೋಸಕ್ಕೆಒಳಗಾದ ಜನಾಂಗವಾಗಿದ್ದಾರೆ. ಮುಖ್ಯವಾಗಿ ಸಮಸ್ಯೆ ಅಡಗಿರುವುದು ಗಿರಿಜನೇತರರು ಇವರ ಭೂಮಿಯನ್ನು ವಂಚಿಸುವುದರಲ್ಲಿ ಗಿರಿಜನರಿಗೆ ಹಂಚಿಕೆಯಾದ ಭೂಮಿಯನ್ನು ಹಳ್ಳಿಯ ಬಡ್ಡಿದಾರರು ಮತ್ತು ಶ್ರೀಮಂತ ಜಮೀನ್ದಾರರು ಮೊದಲು "ವತ್ತೆ" ಯಾಗಿ ಪಡೆದು ನಂತರ ತಾವೇ ಲಪಟಾಯಿಸಿಕೊಳ್ಳುತ್ತಾರೆ. ಇಷ್ಟೇ ಅಲ್ಲದೆ ಇವರು ಗಿರಿಜನರ ಭೂಮಿಯನ್ನು ಒತ್ತುವರಿ ಮಾಡಿಕೊಂಡು ನುಂಗಿ ಹಾಕುತ್ತಾರೆ. ಈ ಸಮಯದಲ್ಲಿ ಭೂಕಂದಾಯ ಇಲಾಖೆಯ ಸಿಬ್ಬಂದಿ

ಭೂ ಸುಧಾರಣೆ ಚರಿತ್ರೆ–14

ಕ್ಷೀರಸಾಗರ

ವರ್ಗ ಗಿರಿಜನರು ಮತ್ತು ಜಮೀನ್ದಾರರ ನಡುವಿನ ಮಧ್ಯವರ್ತಿಗಳಾಗಿದ್ದು ಜಮೀನ್ದಾರರಿಗೆ ಭೂಮಿ ದೊರಕಿಸಿಕೊಡುವ ಕೈಗಳಾಗಿರುತ್ತಾರೆ.

1. Land allottment and land Alienation Politics and Programmes for Scheduled castes & tril es. by Ratna Murdia. EPW. Vol-X No. 32 Aug-9-1975 Page 1206

ಜೀವ ಬೆಳಕು

ಕಾಡು ಕತ್ತಲರಿ
ಕಪ್ಪು ಹೆಪ್ಪಿನಲಿ
ಊರು
ಬೆಳಕು ತಡಕುತಿತ್ತು
ಕಿಡಿಯ ಹುಡುಕುತಿತ್ತು
ಬರಿಕತ್ತಲಲ್ಲಿ
ತಿವಿತಿವಿದು ಜನರು
ಕಾಲಲ್ಲಿ ಕಾಲ ಒದ್ದು
ಮನದಲ್ಲಿ ಮನಕೆ ಗುದ್ದು
ನೋವುಂಡ ಜನರು
ಚೀರಾಡ ತೊಡಗಿ
ಊರೆಲ್ಲ ಚೆಲ್ಲಿ ಕೂತು
ದುಮ್ಮಾನದಿಂದ ಉಮ್ಮಳಿಸಿ ಬಂದ
ದುಃಖದೊಳಗೆ ಹೂತು
ಕಪ್ಪು ಕಣ್ಣುಗಳ
ರೆಪ್ಪೆಯೊಳಗೊಳಗೆ
ಇದ್ದ ನೀರೆಲ್ಲ ಬಾತು
ಹರಿಯ ನೋಟದಲಿ
ಗುರಿಯ ಕಾಣದಲೆ
ಹಿಸುಕಾಡತಿತ್ತು ಜೀವ
ಮಿಸುಕಾಡತಿತ್ತು ಭಾವ

ಇದ್ದೆಲ್ಲ ಬದುಕ
ಒಗ್ಗೂಡಿ ಹಿಡಿದು
ಕರಿಹೈದ ಮೇಲೆ ಎದ್ದ
ತಕತಕನೆ ಕುಣಿಯುತ್ತಿದ್ದ
ಕೇಳಿ ಕೇಳಿ ಕೇಳಿ
ಊರ ಜನರೆ ಏಳಿ
ಹಿಂಡೆ ಒಡೆದಂತೆ
ಬಂಡೆ ಸಿಡಿದಂತೆ
ಚೂರಾಗಿ ಹೋಗಬೇಡಿ
ನೂರಾಗಿ ಚೆಲ್ಲಬೇಡಿ
ಒಂಟೊಂಟಿಯಾಗಿ
ಒಬ್ಬಂಟಿಯಾಗಿ
ಹೆಗಲ ಮೇಲೆ ಹೆಗಲು
ಮುಗಿಲ ಮೇಲೆ ಮುಗಿಲು
ನಡುವಲ್ಲಿ ನಿಂತ
ಕರಿಹೈದ ಆಗ
ಬೆಳೆದ ಬೆಳೆದ ಮೇಲೆ
ಎಳೆದ ಎಳೆದ ಜ್ವಾಲೆ
ಆಕಾಶದಲ್ಲಿ ಮುಚ್ಚಿಟ್ಟುಕೊಂಡ
ಭೂಮಿಯೊಳಗೊಳಗೆ ಬಚ್ಚಿಟ್ಟುಕೊಂಡ
ಕಿಡಿಯ ಕೆದರಿ ತೆಗೆದ
ಊರಾದ ಬಲದಿ ಎಳೆದ
ಇಣಿಕಿಣಿಕಿ ಬಂದ ಕೆಂಪು ಜ್ವಾಲೆಯಬೊ
ಬೆಳಕು ಉಗುಳುತಿತ್ತು
ಊರಿಗೆ ಹೊಳಪು ಚೆಲ್ಲುತಿತ್ತು
ಜೀವ ಬಂದಂತೆ
ಊರೆಲ್ಲ ಜನರು
ಥೈಯ ತಕ್ಕ ಥೈಯ
ಭಾವ ಬಂದಂತೆ
ಇದ್ದೆಲ್ಲ ಜನರು

ಹೊಸಬೆಳಕು ನೋಡು ಆಯ್ಯ

—ಹೊರೆಯಾಲ ದೊರೆಸ್ವಾಮಿ

ಸಂಪಾದಕ,'ಪ್ರಕಾಶಕ ಮುದ್ರಕ : ಗೋವಿಂದಯ್ಯ, ಮಹೇಶ್ವರ ಮುದ್ರಣಾಲಯ, 407, 14ನೇ ಮೈನ್, ಸರಸ್ವತಿಪುರಂಮೈಸೂರು–570009,